a position to speak in Kannada on the platform. Similarly, Sri Sunthankar also knows a little bit of Kannada. The Hon'ble Member Sri Samaji may take their help. So far as I am concerned, I am trying to make all the arrangements that can be made for the Marathi-speaking persons. We have now appointed one Marathi Reporter, but that does not mean that we would be able to make all sorts of arrangements for them. That is quite impossible for me. Under the circumstances, the only alternative is for the Hon'ble Member Sri Samaji to take the help of the Hon'ble Members Sri V. S. Patil and Sri Sunthankar. I think he can do that. I may say once again that I am trying to make all possible arrangements for him. Whatever arrangements I have made have been made with great difficulty. It was not possible to get a Marathi Reporter. I pleaded with the Bombay Government and the Bombay Legislature Department was kind enough to spare one Marathi Reporter for the present and not as a permanent arrangement. Under the circumstances it would be seen that whatever could be done has been done. Now it is for the Hon'ble Member Sri Samaji to take the help of those Hon'ble Members who know Marathi and Kannada.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಪಾರ್ಲಿಮೆಂಟಿನಲ್ಲಿ ಕನ್ನಡ, ತೆಲಗು ಮೊದಲಾದ 14 ಭಾಷೆಗಳಲ್ಲಿ ಮಾತನಾಡಿದರೆ ಭಾಷಾಂತರ ಮಾಡುವುದಕ್ಕೆ ಏರ್ಪಾಡುಮಾಡುವರೆ?

ಅಧ್ಯಕ್ಷರು.—ಪಾರ್ಲಿಮೆಂಟ್ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಬೊಂಬಾಯಿನಲ್ಲಿ ಎಲ್ಲಾಸಾಹಿತ್ಯವನ್ನೂ ಕನ್ನಡದಲ್ಲೇ ಒದಗಿಸುತ್ತಿದ್ದರೆ?

ಅಧ್ಯಕ್ಷರು.—ಕೆಲವು ಮಟ್ಟಿಗೆ ಒದಗಿಸುತ್ತಿದ್ದರು. ನಾವು ನಮಗೆ ಶಕ್ಯವಿರುವುದನ್ನು ಮಾಡೋಣ, ಯಾರ ಮನಸ್ಸಿಗೂ ನೋವನ್ನುಂಟುಮಾಡುವುದು ಬೇಡ.

BOMBAY LOCAL BOARDS (MYSORE AMENDMENT) BILL, 1957.

Introduction.

Sri R. CHENNIGARAMIAH (Minister for Local Self-Government).—Sir, I beg to introduce the Bombay Local Boards (Mysore Amendment) Bill, 1957, which has been published in the *Mysore Gazette* under Rule 48 of the Rules of Procedure and Conduct of Business of the Mysore Legislative Assembly.

Mr. SPEAKER.—The Bombay Local Boards (Mysore Amendment) Bill, 1957, is introduced.

MYSORE LEGISLATURE SALARIES (AMENDMENT) BILL, 1957.

Introduction.

Sri H. K. VEERANNA GOWDH (Minister for Public Works).—Sir, I beg to introduce the Mysore Legislature Salaries (Amendment) Bill, 1957, which has been published in the *Mysore Gazette* under Rule 48 of the Rules of Procedure and Conduct of Business of the Mysore Legislative Assembly.

Mr. SPEAKER.—The Mysore Legislature Salaries (Amendment) Bill, 1957, is introduced.

MOTION ON GOVERNOR'S ADDRESS.

(Debate continued).

Sri V. S. PATIL (Belgaum I).—Mr. Speaker, Sir, the Governor delivered his Address to this House with a view to give us an idea as to what the Government is going to do in the next year. When I read the Address I found certain deficiencies in the Address. I am going to touch only three points in my speech.

The first point that I have to refer is about the minorities. We come from a tract which is predominantly Marathi-speaking. The question as to where this tract should go was discussed threadbare in the last session and I do not want to repeat those arguments again now. We are a minority in this State. The total Marathi-speaking population in Belgaum, Karwar and Bidar is about 6 lakhs and we ten or eleven people here are representing those Marathi-speaking people. Most of us do not know Kannada. Just now one of my Hon'ble colleagues requested the Chair to give some facilities to him so far as the business of the House is concerned. The Chair was pleased to tell him that whatever could be done

(SRI V. S. PATIL.)

by the Chair was being done and that Government also would help them. All the same, I would say that it was the duty of the Head of the State while inaugurating the Assembly Session and making statements of policy, to say what protection was given or proposed to be given to the minorities. There is

1-30 P.M.

not a single sentence about it in the whole of his address. While giving reply, reference might be made either by Government or by some Hon'ble Members of this House to this point and they might say that there were safeguards in the Constitution. The safeguards contained in articles 29 and 30 are safeguards in respect of educational institutions. The only article that can be of real help to us is article 46 which reads thus:

> "The State shall promote with special care the educational and economic interests of the weaker sections of the people, and, in particular, of the Scheduled Castes and the Scheduled Tribes, and shall protect them from social injustice and all forms of exploitation."

We may come under the words "weaker sections of the people" used in this article, because we are an utter minority and it is impossible for us to control the Government. So, I submit that the Governor ought to have given us some guarantees so far as the Marathi section of the people of this State are concerned. What are the real difficulties we are facing now? Recently, the Government has published some notification regarding recruitment to Government service and the essential condition that has been laid down is that the candidate must know Kannada. It may be stated that this condition should be there in a unilingual State, but what about the people speaking and educated in other languages? So, the only solution for this is that the Government must recognise Marathi as a language of the State and must give a guarantee to the Marathi people about their education in Marathi and about Government services or they must try to exclude the tract consisting of Marathi-speaking people from this unilingual State. There is no other alternative except these two. I suggest that, so long as this part is within this State, Government give us guarantee about our education and Government services.

The next difficulty is about education. Recently, we have heard that the Universities are going to impart education in Kannada. If this is enforced, what are our children to do? If they are taught outside this State in Poona or Bombay in Marathi, they are not eligible for Government services. Even though we are the subjects of this State, we are practically precluded from getting any Government jobs. This is a hardship inflicted upon us as a result of States Reorganisation. I, therefore, request the Government to give us a definite assurance in this behalf.

The second point which I should like to urge is the one which I have stressed in my amendment.

MR. SPEAKER.—I hope the Hon'ble Member is aware of the time limit of fifteen minutes. There is still time for him. I am only just giving him a warning so that he can cover all his points within the time limit.

SRI V. S. PATIL.—The second point is about income. It has been said by our Hon'ble Prime Minister that the disparity in income must be wiped out. We have to follow the principles of socialistic pattern of society. So, we have to change the structure of the society into one of socialistic pattern. If this is to be achieved, then the first thing that every Government must try to do is to minimise the difference between the lowest income and the highest income. At present, in the rural areas an agricultural labourer gets a bare 4 annas per day or Rs. 100 at the most per year, whereas the industrialists and capitalists get lakhs of rupees per year. The question is as to how this disparity should be minimised. There ought to have been the mention of some definite policy in this behalf in the address of the Governor, but there is no indication about it at all.

I suppose that at least in Government service the lowest-paid man gets about Rs. 30 whereas the highest-paid man gets about Rs. 3,000. There is no indication in the address as to whether the lowest-paid man is going to get anything more or whether the pay of the highest-paid man is going to be reduced. I also learn that high officers have been given luxurious cars worth Rs. 25,000 at Government cost as well as allowances for motor cars and bungalows and several other allowances. This shows that we are not following the path chalked out to us by our leaders and that we are still following the path of the Britishers. These things ought to have been changed and the address of the Governor ought to have given some indication that such changes are going to be brought about, but that has not been done.

In this connection, I may refer to this huge Vidhana Soudha building. When I came here on the 9th and saw this building, I was overawed. At any rate, I have not seen such a beautiful and fine building built in light blue stones against the background of the blue sky. It is a marvel and I think there is no such building in the whole of India. I was reminded of the Taj Mahal at Agra and of the Houses of Parliament and the Raj Bhavan at Delhi. But the Taj Mahal dazzles the sight, as it is pure white, during the day. But this bluish building appears more magnificent in day time. So far as the Raj Bhavan at Delhi is concerned, it is adorned with Moghal gardens. There is ample space here also for gardens.

(Sri B. K. Puttaramiah attempted to go out crossing the Table).

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಒಂದು ವಿಷಯ ತಿಳಿಸಬೇಕೆಂದಿದ್ದೇನೆ. ಸದಸ್ಯರುಗಳು ಮಾತನಾಡುತ್ತಿರುವಾಗ ನನಗೂ ಅವರಿಗೂ ಮಧ್ಯೆ ನಡೆದಾಡಿದರೆ my mind is distracted. ಆದ್ದರಿಂದ ಮಾತನಾಡುವವರ ಮಧ್ಯೆ ದಯವಿಟ್ಟು ಯಾರೂ ನಡೆದಾಡಬಾರದೆಂದು ನಾನು ಸವಿನಯವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ನಾನಾಗಲೇ ಒಂದು ಸರ್ಕ್ಯುಲರನ್ನು ಕೂಡ ಕಳುಹಿಸಿದ್ದೇನೆ. ತಾವು ಬಹುಶಃ ಅದನ್ನಿನ್ನೂ ನೋಡಿರಲಾರಿರೆಂದು ಕಾಣುತ್ತದೆ. ಇನ್ನುಮೇಲಾದರೂ ಯಾರೂ ಮಧ್ಯೆ ನಡೆದಾಡಬೇಡಿರಿ. ಅದರಲ್ಲೂ ಮಂತ್ರಿಗಳು ನಡೆದಾಡುತ್ತಿರುವುದನ್ನು ನೋಡಿದಾಗ ನನಗೆ ಬಹಳ ದುಃಖವಾಗುತ್ತದೆ. ರೂಲ್ ಮಾಡುವವರಾದ ನಾವೇ ಅವುಗಳನ್ನು ಪಾಲಿಸದಿದ್ದರೆ, ಇನ್ನು ಗತಿಯೇನು ?

Sri V. S. PATIL.—Sir, when I saw this huge building, I just enquired what was the cost and I learnt that the actual cost that had been incurred was Rs. 1,80,00,000. Since there are gardens to be laid out and other things to be done, the cost will exceed Rs. 2 crores. When I speak in this Hall, I see the portrait of the Father of our Nation. What does that portrait picture to our mind? It discloses that India is poor, Indians have not got enough clothes to cover their own bodies. There is no proper food for the people and hence the lean and emaciated body. It required a stick for its support, and that stick is the Government. But the Government by spending a huge sum of money on this building is practically breaking the last bone of our poor men. Under such poor circumstances do we require any such palatial building when millions of people are without houses? If this sum of two crores had been spent for constructing houses for the houseless people, for constructing school buildings, then a great amount of relief could have been given to the people. The only effective use of this magnificent building will be to attract foreign tourists. If this building is handed over to the Central Government it will increase the tourists' traffic. If the picture of this building is advertised elsewhere in the world so many tourists will come to see this building. So the most useful purpose of this building is to attract tourists both from India and foreign countries. As there is no prohibition here that also will add to the attraction of tourists. Hence I submit that such instances of constructing such huge buildings should not happen.

There is a reference in the Governor's Address that fresh taxes would be imposed. There is a sentence also that all should bear the burden. I submit that the people are over-taxed. So, taxes should be levied on the shoulders of those who can bear and not on the shoulders of the common man.

(SRI V. S. PATIL.)

The last point which I would like to bring to the notice of this Hon'ble House is about employment and under-employment. Our Constitution has come into force in 1950. I do not know whether our Government has prepared up-to-date statistics to find out how many persons are employed, how many are unemployed and how many are under-employed. I do not know whether the Government have done anything to find adequate employment for all. Unless it is done we will have to face a serious situation. I submit that the Government must come out of its old atmosphere and must face the facts and do several things possible for the good of the common man.

Sri C. M. ARUMUGAM (Kolar Gold Fields).—Mr. Speaker, Sir, I rise to speak on the Governor's Address. The Congress Government has drawn up various programmes for the year 1957-58. Though the matters concern particularly the district or taluk level, still we say that they are for the welfare of our State. But after going through the Address it strikes me that while the Government is keen to pay more attention to such schemes, the important problem of upliftment of Scheduled Castes whose population is 40 lakhs, has not been thought of. How Government propose to improve their conditions has not been mentioned in the Address. This reminds me of a saying in Tamil which says:

[ತಲ ಒರುವನಕ್ಕು ಉಣವು ಇಲ್ಲೈ ಎನಿಲ್ ಜಗತ್ತಿನ್ನೈ ಅಲ್ಲಾತ್ತುಡುವೋಂ.]

(ಭಾರತಿಯಾರ್)

[Even if one person has no food we will destroy the whole world]

If one suffers for want of food, the idea seems to be, to destroy the whole world. Likewise, the Government have not got a definite programme for the Scheduled Castes, but I am not here to say that because of that they must destroy their schemes. I am sorry to say that. How is it that the Congress Government have failed in their duty to chalk out a definite and clear programme for the improvement of 40 lakhs of Scheduled Castes in the State? I would like to put before the House the exact position of the Scheduled Castes. We are suffering very much in the matter of various social things. There are great disparities in the economic sphere. Ten years ago we achieved our independence. The Scheduled Castes suffered on account of untouchability; they suffered from poverty; they suffered on account of unemployment; they suffered on account of illiteracy; they suffered on account of the treatment meted out by caste Hindus;

Sri S. D. KOTHAWALE (Chikodi).—All are removed now.

Sri C. M. ARUMUGAM.—As to whether they are removed or not, please go and see in the villages.

What is the position today? India has achieved independence and we have got our own Government. There is a saying in China that there are some tailors who stitch the cloth. While they stitch a coat they do not take measurements but they want the old coat. When you give him the old coat the tailor will stitch a new coat. Supposing there is a patch in the old coat, the tailor will put a patch in the new coat also. Likewise, the Congress Government maintained the Scheduled Castes for all these ten years in the same condition. For removing the poverty of the Scheduled Castes, what are the concrete proposals that the Congress Government have got? They say that in order to remove the poverty among the Scheduled Castes they will give some subsidy or some loan or some concession. But these are all in the nature of charity. We do not want any charity, but what we want is human treatment.

They want to be treated on par with others. They need first priority, because they have suffered all along. This caste system and untouchability came into existence, as far as my mind goes, in 600 A.D. So, for these 1300 years, the Scheduled Castes were deprived of all appointments; they were deprived of all educational facilities; they were deprived of all landholdings.

So, such people must be given top priority. What is it that the Congress Governments have done to remove the poverty among the Scheduled Castes? Poverty prevails among the Scheduled Castes on account of compulsory coexistence with the Caste Hindus. If there are 100 houses in a village, 80 belong to Caste Hindus and 20 belong to Scheduled Castes. The Scheduled Caste people living in these 20 houses are asked to do the menial work of the Caste Hindus, and they have to depend upon them for their livelihood. What have the Government done to remove the Scheduled Caste people from the hold of the Caste Hindus? The Congress Government have not made any concrete proposals. So far as I am concerned, I am submitting a concrete proposal to remove the poverty of the Scheduled Castes, to remove the inferiority complex in the minds of the Scheduled Castes. The Scheduled Castes must be put up in a separate colony. Unless the Scheduled Caste people are put up in a separate colony which may consist of 300 to 400 houses, it is not possible for the Scheduled Castes to live independently, without fear or inferiority complex. (*A Member.—You want complete segregation*?) Until the minds of Caste Hindus are changed, it is necessary. You cannot enforce laws to change the minds of the people. I do understand and sympathise with Caste Hindus in the villages who follow strictly orthodox Hinduism because they have been following it for thousands of years; it is not easy for them to give it up. No doubt, there is the Removal of Civil Disabilities Act. But that is not enough. The minds of the people must be changed. If the Caste Hindus are not going to change their minds, we will live away from them for some years till they change their minds. So, for a certain period at least we want to be away from the Caste Hindus without wounding their feelings. To eradicate poverty, this is my suggestion. Secondly, untouchability is there. There is an Act to remove untouchability. It is there only on paper but not in practice. We have prohibition staff. They go during night times to labour colonies or to villages and tap at the doors and make the tenants to come out, and if there is smell of liquor or if their eyes are red, immediately the Police will take them to the court and have them fined. But how many cases they have filed under the Removal of Civil Disabilities Act for practising untouchability? Not one at all. There is no definite programme with the Government to remove untouchability so far as Scheduled Castes are concerned. We will allow this condition for some time. But in the meanwhile, the Ministers must address meetings, must go to the villages and tell the people that they must realise that to whatever community they belong, whatever language they may speak, they are all one. Such a spirit I think, must be inspired in the minds of one and all so that the Caste Hindus who are strictly following Hinduism may realise that the Scheduled Castes are also their brethren. But the Government have not taken any definite step in this direction. When there is no programme to improve 40 lakhs of Scheduled Castes in the year 1957-58, I wonder whether they had any programme in the previous years. If the Government thinks that because they have had first Five-Year Plan, the condition of the Scheduled Castes has improved, then I will put them this question: what was the condition of the Scheduled Castes before Independence, before five years and what is the condition of the Scheduled Castes today? There is reservation of seats provided for Scheduled Castes in the Constitution. But how far has it been implemented?

Sri R. CHENNIGARAMIAH (Minister for Local Self-Government).—It has been fully implemented.

Sri C. M. ARUMUGAM.—I am coming to that. The Scheduled Castes wanted a little priority. How far the policy of reservation has been implemented is the question. None of the Scheduled Castes is made the Head of a Department; none of them is given the post of a High Court Judge; none of the Scheduled Castes has been promoted as Secretary to Government. There are nineteen

(SRI C. M. ARUMUGAM.)

Districts ; one-fifth of the population are Scheduled Castes ; so, out of 19 Deputy Commissioners, 5 of them should belong to Scheduled Castes ; out of 19 District Medical Officers, five of them should belong to Scheduled Castes. In this way, reservation ought to have been made but none of the Scheduled Castes have been given such posts. If there are one or two, they are suffering frequent transfers. The Congress Party were good enough to give 29 seats for the Scheduled Castes. So, they have done it as per the Constitution. In doing so, they have not taken into consideration any qualification for the posts. While considering the Scheduled Caste candidates, they have also considered the Scheduled Caste lady candidates and five ladies have been taken. We are glad about it. Similarly, why not they promote some of the Scheduled Caste experienced hands in the various Departments to the highest posts ? That, they have not done. So, the Government themselves are not doing what they are saying for the improvement of the Scheduled Castes. So far as Education Department is concerned, none of the Scheduled Castes is given foreign scholarship for technical studies. The scholarship given by Government to the Scheduled Castes is only a drop in the ocean. The Government should try to provide funds to give more facilities, more schools and colleges speciallyto the Scheduled Castes until they come on par with others.

The second point I want to bring to the notice of the House is—this may apply only to a particular place but it is of State importance—about the Kolar Gold Fields. In the Address of the Governor, it has been mentioned as to what happened after the nationalisation of Kolar Gold Fields. Is it working on profit or is it working on loss ? What is the condition of workers ? So far as we could see, we have paid heavy compensation of Rs. 164 lakhs. But such an important industry has not been mentioned. Under the Act, they say rationalisation of pay would be undertaken. But the same pay continues. There is no improvement of the workers' condition. The workers are getting the same wages of Re. 1 to Rs. 1-4-0. They are put up in the same thatched houses after nationalisation. There is no scheme to improve the condition of the workers, to improve the welfare of the workers. As the time is short, I won't be a true soldier of the army if I do not conclude within the time allotted. With these few words, I move my amendments.

MR. SPEAKER.—Now we will rise for tea and meet after half an hour.

The House adjourned at Two of the Clock and reassembled at Thirty Minutes past Two of the Clock.

[MR. SPEAKER in the Chair.]

ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ನಾನು ತಂದಿದ್ದ ತಿದ್ದುಪಡಿಯ ಮೇಲೆ ನಾಲ್ಕು ಮಾತುಗಳನ್ನಾಡಲಿಚ್ಛಿಸುತ್ತೇನೆ. ಒಂದನೆಯದಾಗಿ ನಮಗೆ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾಗುತ್ತಾ ಬಂತು. ಆದರೂ ಕೂಡ ಸ್ವಾತಂತ್ರ್ಯದ ಪರಿಣಾಮವಾಗಿ ಜನ ಏನು ಅಪೇಕ್ಷೆ ಮಾಡುತ್ತಿದ್ದರೋ ಆ ವಿಷಯದಲ್ಲಿ ಯಾವ ಒಂದು ಅಭಿವೃದ್ಧಿಯನ್ನೂ ಸಹ ಈಗಿರತಕ್ಕ ಸರ್ಕಾರ ಸಾಧಿಸಿಲ್ಲ. ಯುಗಯುಗಾಂತರಗಳಿಂದ ಸಿಹಿ ನೀರಿನ ನದಿಗಳು ಸಮುದ್ರವನ್ನು ಸೇರುತ್ತಿದ್ದರೂ ಸಹ ಸಮುದ್ರದ ನೀರನ್ನು ದೇವರು ಉಪ್ಪು ನೀರಾಗಿ ಮಾಡಿರುವಂತೆ ಈಗಿನ ಪರಿಸ್ಥಿತಿಯಿದೆ. ಈ ದಿವಸ ಸರ್ಕಾರಕ್ಕೆ ಒಳ್ಳೆಯ ಹೆಸರಿಲ್ಲ, ಆಡಳಿತ ಕ್ರಮ, ಕೆಲಸಮಾಡುವ ವಿಧಾನ ಸಮರ್ಪಕವಾಗಿಲ್ಲ. ಆಡಳಿತ ನಡೆಸುವ ಪಕ್ಷದಲ್ಲಿ ಮೇಧಾವಿಗಳನೇಕರಿದ್ದರೂ ಕೂಡ, ತಜ್ಞರು, ಅನುಭವಿಗಳು ಬಹಳವಾಗಿದ್ದರೂ ಸಹ ಸರಿಯಾಗಿ ವಿಚಕ್ಷಣೆಯಿಂದ ಆಡಳಿತ ನಡೆಸುತ್ತಿಲ್ಲ. ಸ್ವಾತಂತ್ರ್ಯವೇನು ದೊರೆತಿದೆಯೋ ಅದನ್ನು ದುರುಪಯೋಗ ಪಡಿಸುತ್ತಿದ್ದಾರೆ. ಇದರ ದೆಶೆಯಿಂದ ಲಂಚವೆಂಬುದು ತಾಂಡವವಾಡುತ್ತಿದೆ. ಸರ್ಕಾರದವರು ಈ ಲಂಚದ ಹಾವಳಿಯನ್ನು ನಿರ್ಮೂಲಮಾಡಬೇಕೆಂದು ಲಂಚನಿರೋಧ ಶಾಖೆಯನ್ನೇರ್ಪಡಿಸಿದಾಗ್ಯೂ ಸಹ ಇದಕ್ಕಾಗಿ ಸಹಸ್ರಾರು ರೂಪಾಯಿಗಳನ್ನು ವೆಚ್ಚಮಾಡಿದರೂ ಕೂಡ ಲಂಚದ ಹಾವಳಿ ಕಡಮೆಯಾಗದೆ ಇನ್ನೂ ಜಾಸ್ತಿಯಾಗುತ್ತಿದೆ. ಖಂಡಿತ ಈ ಇಲಾಖೆಯಿಂದ ಲಂಚ ನಿರ್ಮೂಲವಾಗುವುದಿಲ್ಲ. ಲಂಚ ಯಾರಾದರೂ ಕೊಡಬೇಕಾದರೆ ಏಕೆ ಕೊಡುತ್ತಾರೆಂಬುದನ್ನು ಯೋಚನೆ ಮಾಡಬೇಕು. ಸಣ್ಣ ಕೆಲಸವಾಗಬೇಕಾದರೂ ಲಂಚ ಕೊಡಬೇಕು, ಕೊಟ್ಟ ಹೊರತು ಕೆಲಸವಾಗುವುದಿಲ್ಲ ಎಂದು ಮನವರಿಕೆಯಾಗಿರುವುದರಿಂದ ತಾನೆ ಸಾರ್ವಜನಿಕರು ಹಣ ಕೊಟ್ಟು ಕೆಲಸ ರೂಢಿಸಿಕೊಳ್ಳಲು ತಯಾರಾಗಿರುವುದು ? ಉದಾಹರಣೆಗೆ ತಾಲ್ಲೂಕು ಆಫೀಸು, ಸಬ್

ರಿಜಿಸ್ಟ್ರಾರ್ ಆಫೀಸು, ಆರ್. ಆರ್. ಆಫೀಸು, ಅಮಲ್ದಾರರ ಕಛೇರಿ ಇಲ್ಲೆಲ್ಲಾ ಲಂಚದ ಹಾವಳಿ ಅತಿಯಾಗಿದೆ. ಒಂದು ಪತ್ರ ರಿಜಿಸ್ಟರಾಗಬೇಕಾದರೆ 20 ರೂಪಾಯಾದರೂ ಕೊಡಬೇಕಾಗುತ್ತದೆ. ಕಾರಣ, ಏನಾದರೂ ಒಂದು ತಪ್ಪು ಹುಡುಕಿ ಅದನ್ನು ಸರಿಪಡಿಸಲು ಊರಿಗೆ ಹೋಗಬೇಕಾಗುವಂತೆ ಆಫೀಸಿನವರು ಮಾಡುತ್ತಾರೆ. ಜಾಗ್ರತೆ ಕೆಲಸವಾಗುವುದಕ್ಕಾಗಿ ಸಾರ್ವಜನಿಕರು ಲಂಚ ತಾವಾಗಿಯೇ ಕೊಡಬೇಕಾಗುತ್ತದೆ. ಹಾಗೆ ಕೊಡದಿದ್ದರೆ ಏನಾದರೂ ನೆಪದಿಂದ ನಿಧಾನ ಮಾಡುತ್ತಾರೆ. ಇದನ್ನು ತಪ್ಪಿಸಲು ಆಡಳಿತ ಕ್ರಮ ಬದಲಾಯಿಸಲು ಸ್ವಲ್ಪ ಪ್ರಯತ್ನ ಮಾಡಬೇಕಾಗಿತ್ತು; ಅದನ್ನು ಮಾಡಿರುವುದಿಲ್ಲ. ಆರ್. ಆರ್. ಪ್ರೊಸೀಜರ್ ಸಹ ಹಾಗೆಯೇ ಇದೆ. ಜಮೀನುಗಳ ಸಂಬಂಧದಲ್ಲಿ ಮ್ಯುಟೇಷನ್ ಫೀಜನ್ನು ಕೊಟ್ಟ ಮೇಲೆ ಮಾಲೀಕನ ಹೆಸರಿಗೆ ಖಾತೆಯಾಗಬೇಕು. ಆದರೆ ಅದಕ್ಕೆ ಹತ್ತು ವರ್ಷಬೇಕು, ವರ್ಷಗಟ್ಟಲೆ ಅದಕ್ಕಾಗಿ ಎಳೆದಾಡುತ್ತಾರೆ; 1936ನೆಯ ಇಸವಿಯಿಂದ ಆಗಬೇಕಾದ ಖಾತೆ ಬದಲಾವಣೆ ವಗೈರೆ ಇನ್ನೂ ಆಗದಿರುವ ಅನೇಕ ನಿದರ್ಶನಗಳಿವೆ. ರೈತರ ಉದ್ಧಾರಕ್ಕಾಗಿ ಸರ್ಕಾರ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯೋಜನೆಗಳನ್ನು ಮಾಡಿದರೂ ಕೂಡ ಟೈಟಲ್ಲಿಗೆ ಸಂಬಂಧಿಸಿದ ಪ್ರಶ್ನೆ ಇತ್ಯರ್ಥವಾಗದಿದ್ದರೆ ರಿಕಾರ್ಡು ವಜಾ ಆಗುತ್ತದೆ. ಖಾತೆ ಹಿಡುವಳಿದಾರನ ಹೆಸರಿಗೆ ಆಗುವವರೆಗೂ ಆತ ಬ್ಯಾಂಕಿನಿಂದ ದೊರೆಯುವ ಸಾಲವನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೆ ಅಡಚಣೆ ಮಾಡಿದಂತಾಗುತ್ತದೆ. ಇದು ಬ್ಯಾಂಕಿನ ತಪ್ಪಲ್ಲ, ಸರ್ಕಾರದ ತಪ್ಪಲ್ಲ, ಬೇಕಾದ ರಿಕಾರ್ಡನ್ನು ಒದಗಿಸಲು ಬಹಳ ಕಷ್ಟವಿರುವುದರಿಂದಲೂ ಅನೇಕ ವೇಳೆ ಸಾಲ ದೊರೆಯುವುದು ತಡವಾಗುತ್ತದೆ. ಇದು ಸಾಲಗಾರನನ್ನು ಲಂಚ ಕೊಡುವಂತೆ ಪ್ರೇರೇಪಿಸುತ್ತದೆ. ಈ ವಿಷಯದಲ್ಲಿ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದರೂ ಸರ್ಕಾರ ತಕ್ಕ ವ್ಯವಸ್ಥೆ ಮಾಡಿಲ್ಲ. ಆಡಳಿತದಲ್ಲಿರುವ ಪಕ್ಷದಲ್ಲಿ ಅಧಿಕಾರ ಲಾಲಸೆ ತುಂಬಿ ತುಳುಕುತ್ತಿದೆ, ತಾಂಡವವಾಡುತ್ತಿದೆ, ಈ ಪಕ್ಷ ಮಂತ್ರಿ ಮಂಡಳವನ್ನು ರಚಿಸುವುದರಲ್ಲೇ ಹೆಚ್ಚು ಕಾಲವನ್ನು ಕಳೆಯುತ್ತಿದೆ. ಆಡಳಿತ ಪಕ್ಷದಲ್ಲಿ ಮೇಧಾವಿಗಳಿದ್ದರೂ ಕೂಡ ದೇಶ ಸ್ವಾತಂತ್ರ್ಯದ ಫಲವನ್ನು ಊಟಮಾಡಿಲ್ಲ. ಇದರಿಂದ ಸರ್ಕಾರಕ್ಕೆ ಈ ವಿಚಾರದಲ್ಲಿ ಆಸಕ್ತಿಯಿಲ್ಲವೆಂದು ಘಂಟಾ ಘೋಷವಾಗಿ ಹೇಳುತ್ತೇನೆ.

ಎರಡನೆಯದಾಗಿ ಒಂದು ವಿಷಯ ಹೇಳುವುದಾದರೆ ಮುನಿಸಿಪಾಲಿಟಿ ಎಸ್ಟಿಮೇಟ್ ಮಾಡಿದರೆ ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಬೇಕು, ಟೆಕ್ನಿಕಲ್ ಸ್ಯಾಂಕ್ಷನ್ ಬೇಕು ಎಂದು ಹೇಳುತ್ತಾರೆ. ಅದಕ್ಕಾಗಿ ಮಂತ್ರಿಗಳ ಬಳಿ ಹೋಗಿ ಬರಲು ವರ್ಷಗಟ್ಟಲೆ ಕಾಯಬೇಕು. ಕೆಲವು ಅನೇಕ ವರ್ಷಗಳಿಂದ ಮಂಜೂರಾಗಿಲ್ಲ. ಇಂಥ ನಿದರ್ಶನಗಳನ್ನು ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಇದರಲ್ಲಿರುವ ಲೋಪ ದೋಷ, ತೊಂದರೆ ತಪ್ಪಬೇಕಾದರೆ ಅಡ್ಮಿನಿಸ್ಟ್ರೇಟಿವ್ ಮೆಥೆಡ್ ಬದಲಾಯಿಸಬೇಕು, ಅಧಿಕಾರ ವಿಕೇಂದ್ರಿಕೃತವಾಗಬೇಕು; ಈಗ ಅಧಿಕಾರವೆಲ್ಲಾ ಕೇಂದ್ರೀಕೃತವಾಗಿದೆ. ಜಿಲ್ಲಾಧಿಕಾರಿಗಳಿಗೆ, ಅಸಿಸ್ಟೆಂಟ್ ಕಮಿಷನರಿಗೆ ಹೆಚ್ಚಿನ ಅಧಿಕಾರ ಕೊಡಬೇಕು, ಹಾಗೆ ಕೊಡದಿದ್ದರೆ, ಅಧಿಕಾರ ವಿಕೇಂದ್ರೀಕೃತವಾಗದಿದ್ದರೆ, ಸಾವಿರ ವರ್ಷಗಳಾದರೂ ನಿಜವಾಗಿಯೂ ದೇಶಕ್ಕೆ ಉಪಕಾರವಾಗುವುದಿಲ್ಲ. ಆಡಳಿತ ವ್ಯವಸ್ಥೆಯೇನಿದೆಯೋ ಅದು ನಮ್ಮ ಜನತೆಗೆ ಅನುಕೂಲವಾಗುವಂತೆ ಹೊಂದಿಕೊಳ್ಳುವಂತೆ ತಿದ್ದುಪಡಿಯಾಗಬೇಕು. ಆಡಳಿತ ಕ್ರಮ ಬದಲಾವಣೆಯಾದ ಹೊರತು ಸ್ವಾತಂತ್ರ್ಯದ ಫಲ ಜನರಿಗೆ ದೊರೆಯುವುದಿಲ್ಲ. ಶ್ರೀ ಶಿವಪ್ಪನವರು ಹೇಳಿದ ವಿಷಯ ಸಮರ್ಥನೆಗೆ ಅರ್ಹವಾದುದಾದರೂ ಚುನಾವಣೆಗೆ ಮುಂಚೆ ಅದನ್ನು ಹೇಳಿದ್ದರೆ ಚೆನ್ನಾಗಿತ್ತು.

ಸ್ಥಳೀಯಸಂಸ್ಥೆಗಳ ವರಮಾನ ಮುಖ್ಯವಾಗಿ ಜಿಲ್ಲಾಬೋರ್ಡಿನ ವರಮಾನ ಕಡಿಮೆಯಾಗಿದೆ. ಕಾರಣ ಎಕ್ಸೈಜು ರೆವಿನ್ಯೂ ಬಾಬುಗಳಿಂದ ಜಿಲ್ಲಾ ಬೋರ್ಡಿಗೆ ಕೊಡುತ್ತಿದ್ದ ಭಾಗವನ್ನು ಕೊಡುತ್ತಿಲ್ಲ. ಪಾನನಿರೋಧ ಜಾರಿಗೆ ಬರುವುದಕ್ಕೆ ಮುಂಚೆ ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಿದ್ದ ಭಾಗವನ್ನು ಪಾನನಿರೋಧ ಜಾರಿಗೆ ಬಂದ ಮೇಲೆ ನಿಲ್ಲಿಸಿರುವುದರಿಂದ ಜಿಲ್ಲಾ ಬೋರ್ಡಿನ ಆದಾಯ ಕಡಮೆಯಾಗಿದೆ. ಪಾನನಿರೋಧದಿಂದ ಸರ್ಕಾರಕ್ಕೆ ಬರುತ್ತಿದ್ದ ಎಕ್ಸೈಜು ರೆವಿನ್ಯೂ ಏನೂ ಕಡಮೆಯಾಗಿಲ್ಲ, ಕೇವಲ ಅಲ್ಪಸ್ವಲ್ಪ ಕಡಮೆಯಾಗಿದ್ದರೂ ಪಾನನಿರೋಧ ಜಾರಿಯಲ್ಲಿರುವ ಚಿತ್ರದುರ್ಗ ಜಿಲ್ಲೆ ಮುಂತಾದ ಕಡೆಗಳಿಂದ ಜುಲ್ಮಾನೆ ರೂಪದಲ್ಲಿ ವಸೂಲಾಗುವ ಹಣದಿಂದ ಆ ಖೋತಾ ಭರ್ತಿಯಾಗುತ್ತಿದೆ. ಜುಲ್ಮಾನೆಯಿಂದ ವರ್ಷಕ್ಕೆ ಸುಮಾರು ಎಂಟು ಸಾವಿರ ರೂಪಾಯಿಗಳ ವರಮಾನ ಬರುತ್ತಿದೆ. ಆದರೆ ಜಿಲ್ಲಾ ಬೋರ್ಡಿಗೆ ಕೊಡುತ್ತಿದ್ದ ಭಾಗವನ್ನು ಕೊಡದೆ ಅದರ ಆರ್ಥಿಕಸ್ಥಿತಿ ಕಠಿಣವಾಗಿದೆ. ಬಾವಿ, ರಸ್ತೆ ವಗೈರೆ ಮಾಡಬೇಕಾದದ್ದು ಏನಿದೆಯೋ ಅದಕ್ಕೆ ಹಣದ ಕೊರತೆಯಿಂದ ಜಿಲ್ಲಾಬೋರ್ಡಿಗೆ ತೊಂದರೆಯಾಗಿದೆ; ಖರ್ಚು ಜಾಸ್ತಿಯಾಗಿ ಆದಾಯ ಕಡಮೆಯಾಗಿದೆ. ಆದಾಯ ಹೆಚ್ಚಾಗಿದ್ದಾಗ ಸಿಬ್ಬಂದಿ ಎಷ್ಟಿತ್ತೋ ಅಷ್ಟೇ ಸಿಬ್ಬಂದಿ ಆದಾಯ ಕಡಮೆಯಾಗಿರುವಾಗಲೂ ಇದೆ; ಚೀಫ್ ಎಗ್ಸಿಕ್ಯೂಟಿವ್ ಆಫೀಸರು, ಮೊದಲನೆ ಮತ್ತು ಎರಡನೆದರ್ಜೆ ಗುಮಾಸ್ತರು ವಗೈರೆ ಮೊದಲಿನಷ್ಟೇ ಇದೆ. ಆದರೆ ವರಮಾನ ಕಡಮೆಯಾಗಿ, ಅಧಿಕಾರ ಸಾಲದೆ ಜಿಲ್ಲಾಬೋರ್ಡಿಗೆ ತನ್ನ ಕಾರ್ಯನಿರ್ವಹಿಸಲು ಶಕ್ತಿಯಿಲ್ಲವಾಗಿದೆ. ಪ್ರಜಾಪ್ರಭುತ್ವ ಜಾರಿಗೆ ಬರುವುದಕ್ಕೆ ಮುಂಚೆ ಈಗಿನ ಆಡಳಿತಪಕ್ಷದವರು ಜಿಲ್ಲಾ ಬೋರ್ಡಿನಲ್ಲಿ ನಾಮಕರಣ ಸದಸ್ಯರಿರುವುದು ಸರಿಯಲ್ಲವೆಂದು ಹೇಳುತ್ತಿದ್ದರು. ಈ ದಿವಸ ನೋಡಿದರೆ ಜಿಲ್ಲಾ ಬೋರ್ಡಿನಲ್ಲಿ ಎಲ್ಲಾ ನಾಮಕರಣ ಮಾಡಿದ ಸದಸ್ಯರೇ ಇದ್ದಾರೆ, ಅವರೆಲ್ಲರೂ ಸೇರಿದ ಸಮಿತಿಯು ವರ್ಷಗಟ್ಟಲೆ ಕೆಲಸ ನಿರ್ವಹಿಸುತ್ತಿದೆ. ಇದನ್ನು ಬಹಳವಾಗಿ ವಿರೋಧಿಸುತ್ತೇನೆ.

ಮೂರನೆಯದಾಗಿ, ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ, ರೈತರೇ ದೇಶದ ಬೆನ್ನುಮೂಳೆ, ಅವನಿಗೆ ಹಣದ ಅಭಾವ ಬಹಳ ಇದೆ, ಅವನ ಜೀವನದ ಮಟ್ಟ ಏರಬೇಕೆಂಬ ಕೂಗಿತ್ತು. ಆ ಕೂಗಿನ ಮೇಲೆ ಕಾಂಗ್ರೆಸ್ಸಿನವರು ಪ್ರಚಾರಮಾಡಿ ಅಧಿಕಾರಕ್ಕೆ ಬಂದಮೇಲೆ ನೀವು ಅವನ ಉದ್ಧಾರಕ್ಕಾಗಿ ಮಾಡಿರುವುದನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ. "ಕಂದಾಯ ಕಡಮೆ ಮಾಡುತ್ತೇವೆ, ಜೀವನದ ಮಟ್ಟ ಏರಿಸುತ್ತೇವೆ. ರೈತರು ಇಷ್ಟು ಕ್ಷೀಣದೆಶೆಯಲ್ಲಿರುವಾಗ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡುಹೋಗಿ ಚಾಮುಂಡಿ ಬೆಟ್ಟದ ಮೇಲೆ ದೀಪ ಹಚ್ಚಲಿಕೆ ವ್ಯರ್ಥವಾಗಿ ಉಪಯೋಗಿಸುತ್ತಿದ್ದಾರೆ" ಎಂದು ಬೆಲಗೂರಿನ ಪಂಚಾಯ್ತಿಹಾಲ್ ಸಮೀಪದಲ್ಲಿ ಬಹಿರಂಗ ಸಭೆ ಸೇರಿದಾಗ ಆಗಿನ ಸರ್ಕಾರವನ್ನು ಅಲ್ಲಗಳೆದರು. ಆದರೆ ಈ ಹೊತ್ತು ಮಾಡಿರುವುದೇನು? ದೇಶದ ಬೆನ್ನು ಮೂಳೆಯಾದ ರೈತನ ಮೇಲೆ ಯಾರ ದೃಷ್ಟಿ ತಾನೆ ಇದೆ? ಅವನ ಪ್ರಶ್ನೆಯೇ ಇಲ್ಲವಲ್ಲ! ಈ

(ಶ್ರೀ ಬಿ. ಎಸ್. ಶಂಕರಪ್ಪ.)

ಹೊತ್ತಿಗೂ ಒಬ್ಬ ಕಾರ್ಖಾನೆಯ ಕೂಲಿಯವನಿಗಾಗಲಿ, ಸರ್ಕಾರಿ ಬಡ ನೌಕರನಿಗೇ ಆಗಲಿ ಜೀವನದಲ್ಲಿ ಒಂದು ಭದ್ರತೆಯಿದೆ. ತಿಂಗಳು ತುಂಬಿದ ತಕ್ಷಣ ಹಣ ಬರುವ ಭರವಸೆಯಿದೆ. ಅದೇ ಬೆಳೆಯತಕ್ಕ ರೈತನಿಗೆ ಯಾವ ಗ್ಯಾರಂಟಿ ಕೊಟ್ಟಿದ್ದೀರಿ? ಮೂರು ವರ್ಷ ಬೆಳೆಯಾದರೆ ಒಂದು ವರ್ಷ ಬೆಳೆಹೋಗುತ್ತದೆ. ಅಗ್ಗೆ ಅವನನ್ನು ಕೇಳುವವರಿಲ್ಲ. ಏನಾದರೂ ಅಕಸ್ಮಾತ್ ಒಂದು ಬಾರಿ ಧಾನ್ಯಕ್ಕೆ ಸ್ವಲ್ಪ ಬೆಲೆ ಬರುವಂತಿದೆ ಯೆಂದರೆ ಕೂಡಲೆ ಕಂಟ್ರೋಲ್ ಹಾಕುವುದೋ, ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುವ ರೀತಿಯಿಂದಲೋ ಅವನಿಗೆ ನ್ಯಾಯವಾಗಿ ಬರುವ ಹಣಕ್ಕೆ ಅಡ್ಡಿ ತರುತ್ತೀರಿ. ಹೀಗೆ ದೇಶದ ಅನ್ನದಾತನಿಗೆ, ಬೆಳೆಯನ್ನು ಬೆಳೆದು ದೇಶವನ್ನು ರಕ್ಷಿಸತಕ್ಕ ರೈತನಿಗೆ ತಾವು ಮಾಡಿಕೊಟ್ಟಿರುವ ಅನುಕೂಲವೇನು? ಅವನು ಬೆಳೆಯುವ ಬೆಳೆಗೆ ಒಂದು ಕನಿಷ್ಠ ಬೆಲೆಯನ್ನು ಗೊತ್ತುಮಾಡಿ ದೇಶದಲ್ಲಿ ಮಿಕ್ಕೆಲ್ಲರ ಜೀವನ ಮಟ್ಟವನ್ನು ಏರಿಸುವುದಕ್ಕೆ ಪ್ರಯತ್ನಿಸುತ್ತಿರುವಂತೆ ಅವನಿಗೂ ಸಹಾಯ ಮಾಡುವುದು ಧರ್ಮವಲ್ಲವೇ? ಅವನಿಗೀಗ ಯಾವ ಸೌಲಭ್ಯಗಳೂ ಇಲ್ಲ. ಸಂಚಾರ ಸೌಕರ್ಯಗಳು ಸಾಲದು ಹಿಂದೆ ಬ್ರಿಟಿಷ್ ಸರ್ಕಾರವಿದ್ದಾಗ I.V.C. ಫಂಡ್ ಎಂದು ಏರ್ಪಟ್ಟಿದ್ದು ಹಳ್ಳಿಯಿಂದ ಹಳ್ಳಿಗೆ ಹೋಗುವುದಕ್ಕೆ ಸುಲಭವಾಗಿ ರಸ್ತೆಗಳು ಆಗುತ್ತಿದ್ದವು. ಈಗ ಅದು ನಿಂತುಹೋಗಿ ಗ್ರಾಮಾಂತರಗಳ ಕಡೆ ಸಂಚಾರ ಸೌಕರ್ಯಗಳು ತೀರ ವಿಷಾದಕರವಾಗಿದೆ. ಕಳೆದ ಚುನಾವಣೆಗಳ ಕಾಲದಲ್ಲಿ ಪೋಲಿಂಗ್ ಸೆಂಟರುಗಳಿಗೆ ಹೋಗಿಬರುವುದಕ್ಕೂ ಅವಕಾಶವಿಲ್ಲದೆ ಪೋಲಿಂಗ್ ಆಫೀಸರುಗಳ ಕಷ್ಟ ಶೋಚನೀಯವಾಗಿತ್ತು, ಎಂದ ಮೇಲೆ ಅಲ್ಲಿ ಚಿಕ್ಕ ಉಮೇದುವಾರರುಗಳ ಗತಿಯೇನು? ಈ ವಿಚಾರದಲ್ಲಿ ರೈತರಿಗೆ ಅನುಕೂಲ ಮಾಡುವುದಕ್ಕೇನು ಮಾಡಿದ್ದೀರಿ? ಇನ್ನು ವಿದ್ಯಾಭ್ಯಾಸದ ವಿಚಾರ ಹೇಳುವುದಾದರೆ, ಈಗಲೂ ವಿಲೇಜ್ ಪಂಚಾಯಿತಿ ಸ್ಕೂಲುಗಳೆಂದು ಹಳ್ಳಿಗಳಲ್ಲಿವೆ. ಅಲ್ಲಿನ ಉಪಾಧ್ಯಾಯರುಗಳಿಗೆ ಬರುತ್ತಿರುವ ಸಂಬಳ ತಿಂಗಳಿಗೆ ಎಂಟು ರೂಪಾಯಿ ನಾಲ್ಕಾಣೆ. ಸರ್ಕಾರಿ ಸ್ಕೂಲು ಜವಾನನು 25 ರೂಪಾಯಿ ಸಂಬಳ, 25 ರೂಪಾಯಿ ಅಲೋಯನ್ಸ್‌ನ್ನು ತೆಗೆದುಕೊಳ್ಳುತ್ತಿರುವಾಗ, ಎಂಟೂ ಕಾಲು ರೂಪಾಯಿ ತೆಗೆದುಕೊಳ್ಳುವ ಪಂಚಾಯಿತಿ ಪ್ರೈಮರಿ ಸ್ಕೂಲು ಉಪಾಧ್ಯಾಯ ಏನು ಶ್ರದ್ಧೆಯಿಂದ ಕೆಲಸ ಮಾಡಿಯಾನು, ಅವನು ಹೇಗೆ ಜೀವನ ಮಾಡಿಯಾನು, ಎಷ್ಟು ಮನಃಪೂರ್ವಕವಾಗಿ ಲಂಚ ಋಷುವತ್ತಿನ ಆಸೆಯಿಲ್ಲದೆ ಪಾಠ ಹೇಳಿಯಾನು? ನಮ್ಮ ರಾಜ್ಯಾಂಗದ ಪ್ರಕಾರ ಹತ್ತು ವರುಷಗಳೊಳಗಾಗಿ 14 ವರ್ಷ ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಉಚಿತ ಶಿಕ್ಷಣ ಕೊಡಬೇಕೆಂದಿದೆ. ಈ ಗುರುತರ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ಸರ್ಕಾರದವರು ನಿರ್ವಹಿಸುತ್ತಾರೋ ಗೊತ್ತಿಲ್ಲ. ಎಷ್ಟೋ ಹಳ್ಳಿಗಳಲ್ಲಿ ಇನ್ನೂ ಸ್ಕೂಲುಗಳೇ ಇಲ್ಲ. ಬೆಂಗಳೂರು ಮೈಸೂರುಗಳಲ್ಲಾದರೋ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಸರ್ಕಾರಿ ಸ್ಕೂಲುಗಳನ್ನು ಕಟ್ಟಿಕೊಡುತ್ತಾರೆ; ಹಳ್ಳಿಗಾಡಿನ ರೈತರಿಗಾದರೆ ಬಿಲ್ಡಿಂಗ್ ಕೊಟ್ಟರೆ ಸ್ಕೂಲು ಕೊಡುತ್ತೇವೆನ್ನುವುದು ಎಷ್ಟು ವಿಷಾದಕರ! ಹಳ್ಳಿಗಾಡಿನವರಾದರೆ, ಸ್ಕೂಲನ್ನು ಕೇಳಲಿ, ಒಂದು ಆಸ್ಪತ್ರೆಯನ್ನು ಕೇಳಲಿ ಯಾವುದಕ್ಕೂ ಡೊನೇಷನ್ ಕೊಡಿ ಎಂದು ಕೇಳುತ್ತಾರೆ, ಪಟ್ಟಣಿಗರಿಗಾದರೆ, ನೀವಾಗಿಯೇ ನಾಲ್ಕಾರು ಸ್ಕೂಲು ಆಸ್ಪತ್ರೆಗಳನ್ನು ಕೊಡುತ್ತಿರುವುದು ಹಳ್ಳಿಯವರಿಗೆ ನ್ಯಾಯತೋರಿದಂತಾಗಿದೆಯೋ? ಹಳ್ಳಿಗಳನ್ನು ಉದ್ಧಾರ ಮಾಡುತ್ತೇವೆಂದು ವಾಗ್ದಾನ ಮಾಡಿದವರು ಇಷ್ಟು ಮಟ್ಟಿಗೆ ಅವರನ್ನು ದುರ್ಲಕ್ಷ್ಯದಿಂದ ಕಾಣುವುದೇ? ಇದನ್ನೆಲ್ಲಾ ನೋಡಿದರೆ ರಾಜ್ಯಪಾಲರ ಭಾಷಣ ಬಹಳ ಅತೃಪ್ತಿಯನ್ನುಂಟುಮಾಡುವುದಾಗಿದೆಯೆಂದು ಹೇಳಿ, ಮಾನ್ಯ ಅಧ್ಯಕ್ಷರ ಆಜ್ಞಾನುಸಾರ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ವೆಂಕಟೇಗೌಡ (ಪಾಳೆಯಂ).—ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ವಿಮರ್ಶಾ ಪೂರ್ವಕವಾದ ದೃಷ್ಟಿಯಿಂದ ನೋಡುವುದಾದರೆ, ದೇಶದ ಹಿತವನ್ನು ಬಯಸುವ ಯಾವ ಕಾರ್ಯಕ್ರಮವೂ ಇದರಿಂದಾಗಿ ಕಂಡುಬರುತ್ತಿಲ್ಲ. ಹಾಗೂ ದೇಶದ ಜನತೆಯ ಸರ್ವಸಮಾನವಾದ ಬೆಳವಣಿಗೆಗೆ ಯಾವ ನಿರ್ದಿಷ್ಟವಾದ ಕಾರ್ಯಕ್ರಮವನ್ನೂ ಇವರು ಹಾಕಿಕೊಂಡಿರುವಂತೆ ಕಾಣದಿರುವುದು ಬಹಳ ವಿಷಾದಕರ. ಅಂತೆಯೇ ದೇಶದ ಜನರಿಗೆ ಮುಖ್ಯವಾಗಿರುವ ವಿಷಯಗಳ ಮೇಲೆ ಎಷ್ಟು ತೀವ್ರವಾಗಿ ಸರ್ಕಾರದವರ ದೃಷ್ಟಿ ಹರಿಯಬೇಕೋ ಅಷ್ಟು ಮಟ್ಟಿಗೆ ಹರಿಯದಿರುವುದೂ ಶೋಚನೀಯ.

ಮೊದಲನೆಯದಾಗಿ ಭಾಷಾವಾರು ರಾಜ್ಯ ವಿಂಗಡಣೆಯಾಗುವ ಸಂದರ್ಭದಲ್ಲಿ ಕೆಲವು ವಿವಾದಾಸ್ಪದವಾದ ಸ್ಥಳಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಗಡಿನಿರ್ಣಯ ಸಮಿತಿ (Zonal Councils)ಗಳನ್ನು ಏರ್ಪಡಿಸುತ್ತೇವೆಂದು ಒಂದು ಆಶ್ವಾಸನೆಯಿತ್ತು. ಅದಾಗಿ ಈ ಹೊತ್ತಿಗೆ ಎಂಟುವರೆ ತಿಂಗಳುಗಳಾದರೂ ಕೂಡ ಯಾವ ದೃಷ್ಟಿಯೂ ಈ ಸಮಸ್ಯೆಯ ಕಡೆ ಹರಿಯದಿರುವುದು ದುಃಖವನ್ನುಂಟುಮಾಡುತ್ತದೆ. ಈ ಹೊತ್ತಿನ ದಿವಸ ನಾವೇನೋ ನಾನಾ ಕನ್ನಡಿಗರು ಸೇರಿ ಒಂದು ಪ್ರಾಂತ್ಯಮಾಡಿಕೊಂಡಂತಾಗಿದೆಯೆನ್ನಬಹುದು. ಆದರೆ, ನಮ್ಮೊಡನೆ ದುಡಿದು, ನಮ್ಮಂತೆ ಕಷ್ಟಕ್ಕೆ ಸಿಕ್ಕಿರುವ ನಮ್ಮ ಈ ಕನ್ನಡನಾಡಿನ ಹೊರಗಡೆಯಿರುವ ಇನ್ನೂ ಕೆಲವು ಕನ್ನಡದ ಭಾಗಗಳ ಜನರ ಸ್ಥಿತಿ ಎಷ್ಟರಮಟ್ಟಿಗಿದೆಯೆಂಬುದನ್ನು ನಾವುಗಳು ಸ್ವಲ್ಪ ಗಮನಿಸಬೇಕು. ಅವರೆಲ್ಲರೂ ಇನ್ನು ಕನ್ನಡರಾಜ್ಯವಾಯಿತು, ಇನ್ನು ಇಡೀ ಕನ್ನಡರಾಜ್ಯ ತಮಗೆ ಬೆಂಬಲವಾಗಿ ಸಹಾಯಮಾಡಿ ತಮ್ಮ ವಿಮೋಚನೆಯನ್ನು ಸಾಧಿಸುತ್ತಿದ್ದಾರೆಂದು ಭಾವಿಸುತ್ತಿದ್ದವರು ಇಂದು ಕಣ್ಣೀರಿಡುತ್ತಿದ್ದಾರೆ. ಆ ನಮ್ಮ ಕನ್ನಡ ಬಾಂಧವರ ಕಣ್ಣಲ್ಲಿ ಕಂಬನಿ ಕಂಡಿತೆಂದರೆ ನಮ್ಮ ಈ ಕನ್ನಡ ನಾಡಿಗೆ ಶ್ರೇಯಸ್ಸೆ? ಕಾಸರಗೋಡು ತಾಲ್ಲೂಕು, ಕಾಳುವಾಡಿ ಹೋಬಳಿ, ಬರಗೂರು ಈ ಪ್ರದೇಶಗಳು ನೂರಕ್ಕೆ ನೂರು ಪಾಲು ಕನ್ನಡ ಮಾತನಾಡುತ್ತಿವೆ. ಚಾಮರಾಜನಗರಕ್ಕೆ ಸೇರಿಕೊಂಡಂತಿದ್ದಾರೆ. ಅಂಥವರನ್ನು ಘಟ್ಟದ ಕೆಳಗಿನ ಜನರು ತಮ್ಮ ಅಧೀನದಲ್ಲಿಟ್ಟುಕೊಂಡು ಬಹಳ ಕೀಳಾಗಿ ಕಾಣುತ್ತಿದ್ದಾರೆ. ಇದನ್ನು ಮನಗಂಡು ಆದಷ್ಟು ಬೇಗನೆ ಕೇಂದ್ರ ಸರ್ಕಾರದವರನ್ನು ಒತ್ತಾಯಪೂರ್ವಕವಾಗಿಯೋ ಅಥವಾ ಪ್ರಾರ್ಥನೆಯ ಮೂಲಕವೋ ಬೇಗ ಗಡಿನಿರ್ಣಯ ಸಮಿತಿಯನ್ನು ಏರ್ಪಡಿಸುವಂತೆಮಾಡಿ ಈ ಸಮಸ್ಯೆಯನ್ನು ಬಗೆಹರಿಸುವಂತೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನಾವು ಅವರಿಗೆ ನ್ಯಾಯವನ್ನು ಸಲ್ಲಿಸಿದಂತಾಗುವುದಿಲ್ಲ. ಆ ಜನರನ್ನು ನಾವು ನಿರ್ಲಕ್ಷಿಸಿದಂತಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಈ ಬಗ್ಗೆ ತೀವ್ರಗಮನ ಕೊಡಬೇಕೆಂದು ನಾನು ಹೇಳುತ್ತೇನೆ ಎರಡನೆಯದಾಗಿ ಭಾಷಾವಾರು ಪ್ರಾಂತರಚನೆಯಾದಾಗ ವಿವಿಧ ಭಾಗಗಳು ಸೇರಿ ವಿಶಾಲ ಮೈಸೂರಾ

ಯಿತು. ಆದರೆ ಮೈಸೂರಿನ ರಚನೆಯಲ್ಲಿ, ಹಿಂದೆಯಿದ್ದ ಮೈಸೂರಿಗೆ ಇತರ ಪ್ರಾಂತಗಳಲ್ಲಿದ್ದ ಕನ್ನಡದ ಭಾಗಗಳು ಇದರಲ್ಲಿ ಸೇರಿಕೊಂಡವು. ಹಿಂದಿನ ಮೈಸೂರಾದರೋ ಅನೇಕ ವಿಧದಲ್ಲಿ ಪ್ರಗತಿ ಹೊಂದಿ ತನ್ನದೇ ಒಂದು ವೈಶಿಷ್ಟ್ಯವನ್ನು ಗಳಿಸಿತ್ತು. ಹೀಗಿರುವಲ್ಲಿ ಅದಕ್ಕೆ ಸೇರಿದ ಕನ್ನಡದ ಭಾಗಗಳು, ಅದರಲ್ಲೂ ಉತ್ತರ ಕನ್ನಡ ಪ್ರದೇಶಗಳು ತೀರ ಹಿಂದುಳಿದುವುಗಳಾಗಿವೆ. ಇದರಿಂದಾಗಿ ಆ ಪ್ರದೇಶದ ಕಡೆಗೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಒಂದೇ ರೀತಿಯಲ್ಲಿ ಎಲ್ಲಾ ಭಾಗಗಳಿಗೂ ನಿಗಾ ಕೊಡದಿದ್ದರೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ನಿದರ್ಶನವಾಗಿ ಹೇಳುವುದಾದರೆ ಮದರಾಸ್ ಪ್ರಾಂತಕ್ಕೆ ಹಿಂದೆ ಸೇರಿದ್ದ ಕೊಳ್ಳೆಗಾಲದಲ್ಲಿ ಕಣ್ಣಿಗೆ ಕಾಣುವಂಥ ಯಾವ ಕಾಂಗಾರಿ ಕೆಲಸಗಳೂ ಅಲ್ಲಿ ನಡೆದಿಲ್ಲ. ಇಂಥ ಸ್ಥಿತಿಯಲ್ಲಿರುವಾಗ ಸರ್ಕಾರದವರು ತನಿಯಾದ ತಮ್ಮ ಗಮನವನ್ನು ಅತ್ತಕಡೆಗೆ ಹರಿಸದಿದ್ದರೆ ನಮ್ಮ ಇಡೀದೇಶವನ್ನು ಪ್ರಗತಿದಾಯಕವಾದ ರೀತಿಯಲ್ಲಿ ಕೊಂಡೊಯ್ಯಲು ಎಂದಿಗೂ ಸಾಧ್ಯವಾಗುವುದಿಲ್ಲ. ದೇಶ ಪುನರ್ವಿಂಗಡಣೆಯಾಗುವ ಸಂದರ್ಭದಲ್ಲಿ ಪಂಡಿತ್ ಜವಹರಲಾಲ್ ನೆಹ್ರೂಅವರು ಹೇಳಿದ ಒಂದು ಮಾತು ಎಲ್ಲರೂ ನೆನಪಿಡಬೇಕಾದ್ದು. ನಮ್ಮ ದೇಶದಲ್ಲಿ ಯಾವ ಒಂದು ಭಾಗ ಹಿಂದುಳಿದಿದ್ದರೂ ದೇಶದ ಪ್ರಗತಿ ಸಾಧನೆಯಾಗಲಾರದು ಎಂದವರು ಹೇಳಿದ್ದಾರೆ: "Poverty anywhere in India constitutes a dangerous obstacle for prosperity everywhere in India." ಇದರರ್ಥವನ್ನು ನಾವು ಪೂರ್ಣವಾಗಿ ಗ್ರಹಿಸುವುದಾದರೆ ನಿಜವಾಗಿ ಹಿಂದುಳಿದಿರುವ ಈ ಪ್ರದೇಶಗಳಿಗೆ ಹೆಚ್ಚು ಹೆಚ್ಚು ನಿಗಾ ಕೊಡಬೇಕಾಗಿರುತ್ತದೆ.

ಮೂರನೆಯದಾಗಿ, ನಿನ್ನೆ ತಾನೆ ಪ್ರಶ್ನೋತ್ತರಗಳ ಕಾಲದಲ್ಲಿ ಒಂದು ವಿಷಯ ಪ್ರಸ್ತಾಪಮಾಡಿದರು. ಹಿಂದಿನ ಮೈಸೂರು ಸರ್ಕಾರ ರಾಜಕೀಯದಲ್ಲಿ ನೊಂದವರಿಗೆ ಭೂಮಿಯನ್ನು ಕೊಡಬೇಕೆಂದು ಒಂದು ನಿಯಮವಿಟ್ಟುಕೊಂಡಂತೆ ಗೊತ್ತಾಯಿತು. ವಾಸ್ತವವಾಗಿ ಆ ರಾಜಕೀಯದಲ್ಲಿ ದುಡಿದ ವ್ಯಕ್ತಿಗಳಿಗೆ ಇದು ಮರ್ಯಾದೆಗಿಂತ ಅವಮಾನವನ್ನುಂಟು ಮಾಡುವಂಥ ಹದು. ಏಕೆಂದರೆ ಯಾವ ರಾಜಕೀಯ ಹೋರಾಟದಲ್ಲಿ ನುಗ್ಗಿದ ಮಹಾ ವ್ಯಕ್ತಿಯೂ, ಸ್ವಾತಂತ್ರ ಸಂಗ್ರಾಮಕ್ಕೆ ಧುಮುಕಿದ ಯೋಧನೂ ದೇಶ ಪ್ರೇಮಿಯೂ, ಮುಂದೆ ತನಗೆ ಜಯಲಭಿಸಿದಾಗ, ದೇಶ ಸ್ವಾತಂತ್ರ ಗಳಿಸಿದಾಗ ಪರಿಹಾರ ತನಗೆ ದೊರಕುತ್ತದೆಂಬ ಫಲಾಕಾಂಕ್ಷೆಯಿಂದ ಕಾರ್ಯಕ್ರಮಕ್ಕೈಕೊಳ್ಳಲಿಲ್ಲವೆಂದು ನಾನು ಹೇಳ ಬಯಸುತ್ತೇನೆ. ರಾಜಕೀಯರಂಗದಲ್ಲಿ ಸ್ವಾತಂತ್ರ ಸಂಗ್ರಾಮದಲ್ಲಿ ಮತ್ತು ರಾಜಕೀಯ ಆಂದೋಳನದಲ್ಲಿ ಭಾಗವಹಿಸಿದವರಿಗೂ ಮತ್ತು ಸತ್ಯಾಗ್ರಹಿಗಳಿಗೂ ಭೂಮಿಯನ್ನು ಹಂಚಿಕೆ ಮಾಡುವ ವಿಚಾರದಲ್ಲಿ ಸರ್ಕಾರದವರು ಸಹಾನುಭೂತಿಯನ್ನು ತೋರಿಸುತ್ತಿದ್ದಾರೆ. ಅವರಿಗೆ ಒಂದು ಪರಿಹಾರ ರೂಪವಾಗಿ ಸ್ವಾತಂತ್ರ ಬಂದಮೇಲೆ ಭೂಮಿಯನ್ನು ಹಂಚುತ್ತಿದ್ದಾರೆ. ಆದರೆ ದೇಶದಲ್ಲಿ ನಿರ್ದಿಷ್ಟವಾಗಿ ಉಳುವವನಿಗೆ, ಉಳುವುದರಲ್ಲಿ ಹೆಚ್ಚು ಆಸಕ್ತಿ ಇರುವವನಿಗೆ, ಜಮೀನು ಇಲ್ಲದೇ ಇರುವವನಿಗೆ, ಯಾವನಾದರೂ ಸರಿಯೇ, ಸತ್ಯಾಗ್ರಹದಲ್ಲಿ ಭಾಗವಹಿಸಿರಲಿ, ವಹಿಸದೇ ಇರಲಿ, ಅವನು ನಿಜವಾಗಿ ವ್ಯವಸಾಯ ಮಾಡುವುದರಿಂದಲೇ ಜೀವನ ನಡೆಯಿಸುತ್ತಿದ್ದರೆ ಅಂತಹವರಿಗೆ ಜಮೀನುಗಳನ್ನು ಹಂಚುವ ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಕೈಗೊಳ್ಳಬೇಕು. ಇಲ್ಲದಿದ್ದರೆ ನಮ್ಮನ್ನು ನಾವೇ ಅಲ್ಲಗಳೆಯಬೇಕಾಗಿ ಬರುತ್ತದೆ. ನಾನು ಈ ವಿಷಯವನ್ನು ಬಹಳ ಒತ್ತಾಯ ಪೂರ್ವಕವಾಗಿ ಹೇಳಬೇಕಾಗಿದೆ. ಇವತ್ತಿನ ದಿವಸ ಕೊಳ್ಳೇಗಾಲ ತಾಲ್ಲೂಕನ್ನು ತೆಗೆದುಕೊಂಡರೆ, ಅಲ್ಲಿ 25 ಸಾವಿರ ಎಕರೆಯಷ್ಟು ಸರ್ಕಾರಕ್ಕೆ ಸಂಬಂಧಪಟ್ಟ ಭೂಮಿ ಇದೆ. ಆದರಲ್ಲಿ ಬಹು ಭಾಗವನ್ನು ಭೂಮಿ ಉಳುವ ರೈತರು ಚೆನ್ನಾಗಿ ವ್ಯವಸ್ಥೆ ಮಾಡಿ ಭೂಮಿಯನ್ನು ಬಹಳ ಫಲವತ್ತಾಗಿ ಮಾಡಿದ್ದಾರೆ. ಇಂತಹ ಭೂಮಿಯನ್ನು ಅಲ್ಲಿಯ ರೈತರಿಗೇ ಧಾರೆ ಎರೆಯುವುದರಿಂದ ಕಾಂಗ್ರೆಸ್ ಧ್ಯೇಯ ಧೋರಣೆಏನಿದೆಯೋ ಅದು ಕಾರ್ಯಗತವಾಗುವುದರಲ್ಲಿ ಯಾವಸಂದೇಹವೂ ಇಲ್ಲ. ಇದನ್ನು ಬಿಟ್ಟು ಕೇವಲ ರಾಜಕೀಯ ಆಂದೋಲನದಲ್ಲಿ ಭಾಗವಹಿಸಿದವರಿಗೆ ಇಂತಹ ಭೂಮಿಗಳನ್ನು ಹಂಚಿಕೆಮಾಡುವುದರಿಂದ ನಮ್ಮನ್ನುನಾವೇ ಅಲ್ಲಗಳೆಯುವಂತಾಗಿ ಅಪಮಾನ ಮಾಡಿಕೊಂಡಂತಾಗುತ್ತದೆ. ಇಂತಹ ಉದ್ದೇಶವನ್ನು ಸರ್ಕಾರ ಇಟ್ಟುಕೊಳ್ಳುವುದು ಬಹಳ ಅನ್ಯಾಯ ಮತ್ತು ಅದು ಒಂದು ಲಂಚಕೋರತನಕ್ಕೆ ಕಾರಣವಾಗುತ್ತದೆ ಎಂದು ಸರ್ಕಾರದವರಿಗೆ ಬಿನ್ನೈಸುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—25 ಸಾವಿರ ಎಕರೆ ಭೂಮಿ ಎಂದು ಹೇಳಿದಿರಿ. ಅದು ಯಾವುದು ?

ಶ್ರೀ ಜಿ. ವೆಂಕಟೇಗೌಡ.—ಸರ್ಕಾರಕ್ಕೆಸಂಬಂಧಪಟ್ಟ ಭೂಮಿ.ಕಳೆದ ತಿಂಗಳು ಸರ್ಕಾರಕ್ಕೆ ಗೊತ್ತಿರುವ ಹಾಗೆ ದೇಶಾದ್ಯಂತ ವಿಪರೀತ ಮಳೆಯಾಗಿದೆ. ಅದರ ದೆಸೆಯಿಂದ ಎಷ್ಟೋ ಕೆರೆಕಟ್ಟೆಗಳು ನೀರುತುಂಬಿ ಪಕ್ಕದ ಗ್ರಾಮಗಳಲ್ಲಿ ಎಷ್ಟೋ ಅಪಘಾತಗಳು ನಡೆದು ಬಹಳವಾದ ದುಃಸ್ಥಿತಿ ಮತ್ತು ಅಪಾರವಾದ ನಷ್ಟ ಉಂಟಾಗಿದೆ. ನಮ್ಮ ಒಂದು ತಾಲ್ಲೂಕಿನಲ್ಲಿಯೇ ದಿನಕ್ಕೆ17 ಅಂಗುಲಮಳೆಯಂತೆ ಮೂರು ದಿವಸಗಳಾಯಿತು. ನಮ್ಮ ಜಿಲ್ಲೆಯ ಡಿವಿಜನಲ್ ಕಮಿಷನರ್ ಅವರ ಲೆಖ್ಖದ ಪ್ರಕಾರ ಎಷ್ಟೋ ಸ್ವತ್ತು ನಷ್ಟವಾಗಿದೆ ಎಂದು ಹೇಳಿದ್ದಾರೆ. ಇಂತಹ ದುಃಸ್ಥಿತಿಯನ್ನು ಕಂಡು ನನ್ನತಾಲ್ಲೂಕಿನಲ್ಲಿ ಅಪಾರವಾಗಿ ನಷ್ಟಕ್ಕೀಡಾಗಿರುವವರಿಗೆ ಪರಿಹಾರವನ್ನು ಕೊಡಲು ರಾಜ್ಯಪಾಲರ ಭಾಷಣದಲ್ಲಿ ಯಾವೊಂದು ಸಹಾನುಭೂತಿಯನ್ನೂ ತೋರಿಸದೆ ಇರತಕ್ಕದ್ದು ನಿಜವಾಗಿಯೂ ಶೋಚನೀಯವಾಗಿದೆ. ಈಚೆಗೆ ಈ ಮಳೆಯದೆಸೆಯಿಂದ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಅನೇಕ ಹೊಲ ಗದ್ದೆಗಳಿಗೆ ನೀರು ನುಗ್ಗಿ ಭಾವಿಗಳು ಮತ್ತು ಕೆರೆಗಳು ತುಂಬಿಹೋಗಿ ನೀರು ಮನೆಗಳಿಗೆ ನುಗ್ಗಿ ಸುಮಾರು $1\frac{1}{2}$ ಲಕ್ಷ ರೂಪಾಯಿಗಳಷ್ಟು ನಷ್ಟವುಂಟಾಗಿದೆ. ಇದನ್ನು ಸರ್ಕಾರದವರು ವಿಶಾಲ ದೃಷ್ಟಿಯಿಂದ ನೋಡಿ ನಷ್ಟಕ್ಕೀಡಾದವರಿಗೆ ಪರಿಹಾರ ನೀಡಬೇಕಾಗಿದೆ. ಅನೇಕ ಮಾನ್ಯ ಮಂತ್ರಿಗಳು ಅದಕ್ಕೆ ಬೇಕಾದ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ಭರವಸೆಯನ್ನೂ ಸಹ ಗ್ರಾಮಸ್ಥರಿಗೆ ಕೊಟ್ಟಿದ್ದಾರೆ. ಈ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಯಾವ ಸಹಾನುಭೂತಿಯನ್ನೂ ತೋರಿಸಲಿಲ್ಲ. ನಿನ್ನೆಯ ದಿವಸ ನನ್ನ ಕೆಲವು ಮಾನ್ಯಮಿತ್ರರು ಪಾನನಿರೋಧದ ವಿಷಯವಾಗಿ ಬಹಳವಾಗಿ ಮಾತನಾಡಿದರು. ನಮ್ಮ ಸರ್ಕಾರದವರು ಈ ಪಾನನಿರೋಧದ ವಿಷಯದಲ್ಲಿ ಯಾವ ಒಂದು ನಿರ್ದಿಷ್ಟವಾದ ನೀತಿಯನ್ನೂ ಹಾಕಿಕೊಳ್ಳದೆ, ಹೊರಗಿನ ನಾಗರಿಕ ಪ್ರಪಂಚ ನಗುವ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮದರಾಸ್ ಸಂಸ್ಥಾನದಲ್ಲಿ ಒಂದುಸಾರಿ ಇಷ್ಟೇ ವರ್ಷಗಳಲ್ಲಿ ಸಂಸ್ಥಾನಾದ್ಯಂತ ಪೂರ್ಣವಾಗಿ ಮತ್ತು ಯಶಸ್ವಿಯಾಗಿ ಪಾನನಿರೋಧವನ್ನು ಜಾರಿಗೆ ತರಬೇಕೆಂಬ ಯೋಜನೆ

(ಶ್ರೀ ಜಿ. ವೆಂಕಟೇಗೌಡ.)

ಇಟ್ಟುಕೊಂಡಿದ್ದರು. ಅದೇರೀತಿ ಪ್ರತಿಯೊಂದು ವರ್ಷದಲ್ಲಿಯೂ ಎರಡು, ಮೂರು ಜಿಲ್ಲೆಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತಂದು ಈಗ ನಾಲ್ಕೈದು ವರ್ಷಗಳಲ್ಲಿ ಪೂರ್ತಿಯಾಗಿ ಇಡೀ. ಮದರಾಸ್ ಸಂಸ್ಥಾನದಲ್ಲಿ ಪಾನನಿರೋಧ ಶಾಸನವನ್ನು ಜಾರಿಗೆ ತಂದರು. ಈಗ ಇಲ್ಲಿ ಕೆಲವು ಕಡೆ ಪಾನನಿರೋಧ ಜಾರಿಯಲ್ಲಿದೆ; ಮತ್ತೆ ಕೆಲವು ಕಡೆ ಜಾರಿಯಲ್ಲಿಲ್ಲ. ಅದರೆ ನಮ್ಮ ಕಾನ್ಸ್ಟಿಟ್ಯೂಷನ್‌ನಲ್ಲಿ ಒಂದು ಮ್ಯಾಂಡೇಟರಿ ಪ್ರಾವಿಷನ್ ಇದೆ. ನಾವು ಅದನ್ನು ಉಲ್ಲಂಘಿಸುತ್ತಿದ್ದೇವೆ. ಇದನ್ನು ನಾವು ಅರಿತುಕೊಳ್ಳಬೇಕಾಗಿದೆ. ನಮ್ಮ ದೇಶದಲ್ಲಿ ಪಾನನಿರೋಧವನ್ನು ಎಲ್ಲಕಡೆಯಲ್ಲೂ ಜಾರಿಗೆ ತರದೇ ಇರುವುದರಿಂದ, ಪಾನನಿರೋಧ ಎಲ್ಲೆಲ್ಲಿ ಜಾರಿಯಲ್ಲಿದೆಯೋ ಅಲ್ಲಿಯೂ ಯಶಸ್ವಿಯಾಗಿಲ್ಲ. ಈಗ ಏನಾಗಿದೆಯೆಂದರೆ ಒಂದು ಕಡೆ ಕುಡಿಯುವುದನ್ನು ತಪ್ಪಿಸಿದರೆ ಇನ್ನೊಂದುಕಡೆ ಕುಡಿಯುವುದಕ್ಕೆ ಹೋಗುತ್ತಾರೆ. ಹೀಗೆ ಒಂದು ಊರಿನಿಂದ ಇನ್ನೊಂದು ಊರಿಗೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ-ಹೀಗೆ ಹೋಗಿ ಕುಡಿಯುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಈಗ ಕೊಳ್ಳೇಗಾಲದಲ್ಲಿ ಕುಡಿದರೆ ಅವನು ತಪ್ಪಿತಸ್ಥ; ಬೇರೆಕಡೆ ಕುಡಿದರೆ ಅವನು ತಪ್ಪಿತಸ್ಥನಲ್ಲವೋ? ಇದಕ್ಕೆ ಉತ್ತರ ಅವರೇ ಹೇಳಲಿ. ಇದರಿಂದ ಉಂಟಾಗುತ್ತಿರುವ ನ್ಯೂನತೆಗಳನ್ನು ಸರಿಪಡಿಸಬೇಕಾದರೆ ಇಡೀ ರಾಜ್ಯದಲ್ಲಿಯೇ ಪಾನನಿರೋಧ ಶಾಸನವು ಜಾಗ್ರತೆಯಾಗಿ ಜಾರಿಗೆ ಬರಬೇಕು. ಅದು ಎಷ್ಟೇ ಕಷ್ಟವಾಗಲಿ, ಯಾವುದಾದರೂ ಒಂದು ದೊಡ್ಡ ಯೋಜನೆಯು ಕೆಲಸವನ್ನು ತೆಗೆದು ಹಾಕಿದರೂ ಸರಿಯೇ, ಇದನ್ನು ಯೋಗ್ಯವಾದ ರೀತಿಯಲ್ಲಿ ನೆರವೇರಿಸಬೇಕಾಗಿದೆಯೆಂದು ಸರ್ಕಾರದವರನ್ನು ತಮ್ಮ ಮೂಲಕ ನಾನು ಎಚ್ಚರಿಸಬೇಕಾಗಿದೆ. ಈ ಪಾನನಿರೋಧ ಶಾಸನದಿಂದ ಬೇಕಾದಷ್ಟು ಅನುಕೂಲತೆಗಳನ್ನು ಸಮಾಜಕ್ಕೆ ಒದಗಿಸಿ ಅದರ ಹಿತ ಬಯಸುವ ಬದಲು ಅನೇಕ ಜನರು ಸಮಾಜದ್ರೋಹಿಗಳಾಗಿದ್ದಾರೆ. ಇದನ್ನು ತಡೆಗಟ್ಟಬೇಕಾದರೆ ಸರ್ಕಾರ ಒಂದು ಕ್ರಮವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇವೊತ್ತಿನ ದಿವಸ ಪೋಲೀಸ್‌ನವರ ಹತ್ತಿರ ಯಾರು ಯಾರು ಸಾಕ್ಷಿ ಹೇಳುವುದಕ್ಕೆತಯಾರಾಗಿದ್ದಾರೋ ಅಂತಹವರ ಹತ್ತಿರ ಕಳ್ಳಸಾರಾಯಿ ಸಾಗಾಣಿಕೆ ಯಾಗುತ್ತಿದೆ ಎಂದು ನಾನು ಹೇಳುತ್ತೇನೆ. ಅನೇಕರು ಅಂತಹ ಕಳ್ಳವ್ಯಾಪಾರವನ್ನು ಕೈಕೊಂಡಿದ್ದಾರೆ. ನಿಜವಾಗಿ ನಾವು ಯಾವ ಸಮಾಜವನ್ನು ಕಟ್ಟ ಬೇಕೆಂದು ಆಶೆ ಇಟ್ಟುಕೊಂಡಿದ್ದೇವೋ, ಅದಕ್ಕೆ ವ್ಯತಿರಿಕ್ತವಾಗಿ ಕೆಲಸ ವಾಗುತ್ತಿದೆ. ಅದಕ್ಕಾಗಿ ರಾಜ್ಯದಲ್ಲಿ ಪಾನನಿರೋಧ ಶಾಸನವನ್ನು ಜಾರಿಗೆ ತರುವಂತೆ ಮಾಡುವುದಾದರೆ, ಆಗ ನಾವು ಯಾವ ಧ್ಯೇಯ ಧೋರಣೆಯನ್ನು ಇಟ್ಟುಕೊಂಡಿದ್ದೇವೋ, ಅದನ್ನು ಸಾಧಿಸಿದಂತಾಗುತ್ತದೆ ಎಂದು ಹೇಳ ಬಯಸುತ್ತೇನೆ.

ಆಡಳಿತ ವಿಚಾರದಲ್ಲಿ ಅನೇಕ ಮಹನೀಯರು ಈಗಾಗಲೇ ಮಾತನಾಡಿದ್ದಾರೆ. ನಾನು ಅದನ್ನೇ ಮತ್ತೆ ಹೇಳಬೇಕಾದ ಅವಶ್ಯಕತೆ ಇಲ್ಲ. ಆದರೆ ನಮ್ಮ ಸರ್ಕಾರದ ಆಡಳಿತದಲ್ಲಿ ಸರಿಯಾದ ಬಿಗಿ ಇಲ್ಲ. ಲಂಚಕೋರತನವೇನೋ ಜಾಸ್ತಿಯಾಗುತ್ತಿದೆ.

ಒಟ್ಟಿನಲ್ಲಿ ನಾನು ಹೇಳುವುದಾದರೆ, ಮುಖ್ಯವಾಗಿ ಸರ್ಕಾರದವರು ನಮ್ಮ ಜೊತೆಗೆ ಸೇರದೆ ಕಷ್ಟವನ್ನು ಅನುಭವಿಸುತ್ತಾ ಇರುವ ಇನ್ನೂ ಕೆಲವು ನಮ್ಮ ಅಕ್ಕಪಕ್ಕದ ಕನ್ನಡಿಗರನ್ನು ನಮ್ಮೊಡನೆ ಸೇರಿಸುವ ಕರ್ತವ್ಯವನ್ನು ಮೊದಲುಮಾಡಬೇಕು, ಅಲ್ಲದೆ ಸರ್ಕಾರದಲ್ಲಿರ ತಕ್ಕ ಜಮೀನುಗಳೆಲ್ಲವನ್ನೂ ಜಮೀನು ಇಲ್ಲದ ರೈತರಿಗೂ ಮತ್ತು ಬಡಬಗ್ಗರಿಗೂ ಹಂಚುವ ವ್ಯವಸ್ಥೆಯನ್ನು ಏರ್ಪಾಡು ಮಾಡಬೇಕು. ಹಿಂದುಳಿದ ಪ್ರದೇಶಗಳಿಗೆ ಗಮನಕೊಟ್ಟು ಅವುಗಳನ್ನು ಅಭಿವೃದ್ಧಿಪಡಿಸಿ, ಹಿಂದುಳಿದ ಪಂಗಡಗಳವರ ಕಡೆಗೆ ಲಕ್ಷ್ಯವನ್ನಿಡಬೇಕು. ತಮ್ಮ ಮೂಲಕ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದು ಅಥವಾ ಎಚ್ಚರಿಸುವುದು ಇಷ್ಟೇ: ನಾನು ತಿಳಿಸಿದ ವಿಚಾರಗಳ ಕಡೆಗೆ ಸರ್ಕಾರದವರು ಗಮನ ಕೊಡದೇ ಇದ್ದರೆ, ಯಾವ ಒಂದು ಧೋರಣೆಯನ್ನು ನಾವು ಇಟ್ಟುಕೊಂಡಿದ್ದೇವೋ, ಅದಕ್ಕೆ ದ್ರೋಹಮಾಡಿದಂತಾಗುತ್ತದೆ ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ರಾಜ್ಯಪಾಲರ ಈ ವರ್ಷದ ಭಾಷಣವನ್ನು ನಾನು ತುಲನಮಾಡಿ ನೋಡಿದ್ದರಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಹಿಂದೆ ಯಾವರೀತಿ ಐದುವರ್ಷಗಳಿಂದಲೂ ಭಾಷಣವನ್ನು ಮಾಡುತ್ತಾ ಇದ್ದರೋ ಅದೇರೀತಿ ಈ ವರ್ಷವೂ ಭಾಷಣವನ್ನು ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಮುಖ್ಯವಾಗಿ ಭಾಷೆಯೆಂಬುದೊಂದೇ ಮಹತ್ವವಲ್ಲ, ಪ್ರತಿಯೊಂದರಲ್ಲೂ ಒಂದು ತತ್ವ, ಒಂದು ನೀತಿ ಇರುವುದು ಮುಖ್ಯವಾದುದು ಎಂಬುದಾಗಿ ನಾನು ತೀರ್ಮಾನಕ್ಕೆ ಬಂದಿದ್ದೇನೆ. 1952ನೇ ಇಸವಿಯಿಂದ, ಅಂದರೆ ಸುಮಾರು ಐದು ವರ್ಷಗಳಿಂದಲೂ ಅವರ ಭಾಷಣವನ್ನು ಕೇಳುತ್ತಿದ್ದೇನೆ. ಅದನ್ನು ವಿಶದವಾಗಿ ನೋಡುವುದಾದರೆ ಸರ್ಕಾರ ತಮ್ಮ ಕರ್ತವ್ಯದಮೇಲೆ ಎಷ್ಟು ದೃಷ್ಟಿ, ಎಷ್ಟು ಆಸಕ್ತಿಗಳನ್ನು ಇಟ್ಟಿದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಅಂದಮೇಲೆ ಅವರು ಮಾಡತಕ್ಕಂಥ ಕೆಲಸಗಳಲ್ಲಿ ಏನಾದರೂ ನೀತಿಯಿದೆಯೇ ಎಂಬುದನ್ನು ಮಾನ್ಯ ಸದಸ್ಯರೇ ಯೋಚಿಸಬೇಕು. ಅವರು ಸ್ವಲ್ಪ ಮಟ್ಟಿಗೆ ಅಲ್ಪ ಕೆಲಸ ಮಾಡಿದರೂ ಅವುಗಳನ್ನು ವಿಶೇಷವಾಗಿ ಶ್ರಮವಹಿಸಿ ಕೆಲಸಮಾಡಿದಹಾಗೆ ತೋರ್ಪಡಿಸಿದ ಕೆಲವು ಸ್ಟೇಟ್‌ಮೆಂಟುಗಳನ್ನು ಈಗ ನನಗೆ ಕಾಲಾವಕಾಶವನ್ನು ಹೆಚ್ಚಾಗಿಕೊಟ್ಟರೆ ತಮ್ಮೆಲ್ಲರ ಅವಗಾಹನೆಗೆ ತರಲು ಅಪೇಕ್ಷಿಸುತ್ತೇನೆ. ಒಂದು ವರ್ಷದ ರಾಜ್ಯಪಾಲರವರ ಭಾಷಣಕ್ಕೂ ಮತ್ತೊಂದು ವರ್ಷದ ಭಾಷಣಕ್ಕೂ ಏನಾದರೂ ಸಂಬಂಧವಿದೆಯೇ ಎಂದು ನೋಡಿದರೆ ಏನೂ ಸಂಬಂಧವಿಲ್ಲ ಎಂಬಂತೆ ಕಾಣುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿದ ವಿಷಯ ಮುಂದಿನ ವರ್ಷದಲ್ಲಿ ಕಾರ್ಯಗತವಾಗಿದೆ ಎಂದು ಕಾಣುವುದಿಲ್ಲ. ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ನನ್ನ ಸರ್ಕಾರದವರು ಈ ಕೆಲಸವನ್ನು ಮಾಡುತ್ತಾರೆ, ಆ ಕಾರ್ಯವನ್ನು ನೆರವೇರಿಸುತ್ತಾರೆ ಎಂದು ಹೇಳುತ್ತಾರೆಯೇ ವಿನಾ ಎಷ್ಟು ಕೆಲಸ ಕಾರ್ಯಗತವಾಗಿದೆ ಎಂಬುದನ್ನು ಅವಲೋಕಿಸಿದರೆ ಶೇಕಡಾ ಒಂದು ಅಥವಾ ಎರಡರಷ್ಟು ಸಹ ಆದಂತೆ ಕಾಣುವುದಿಲ್ಲ. ಆದುದರಿಂದ ರಾಜ್ಯಪಾಲರ ಭಾಷಣವನ್ನು ಸಿಂಹಾವಲೋಕನಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಕಳೆದ ಐದು ವರ್ಷಗಳಿಂದ ಮಾಡುತ್ತ ಬಂದಿರುವ ಇದೊಂದು ಸಾಂಪ್ರದಾಯಿಕ ಭಾಷಣವಾಗಿದೆ, ಇದಕ್ಕೆ ಮಹತ್ವವಿಲ್ಲ, ನೀತಿಯಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇನೆ. ರಾಜ್ಯಪಾಲರ ಒಂದು ವರ್ಷದ ಭಾಷಣಕ್ಕೂ ಮತ್ತೊಂದು ವರ್ಷದ ಭಾಷಣಕ್ಕೂ ಸಂಬಂಧವೇ ಇಲ್ಲವಾಗಿದೆ.

ರಾಜ್ಯಪಾಲರವರು 1953 ರಲ್ಲಿ ಮಾಡಿದ ಭಾಷಣದಲ್ಲಿ ಆ ವರ್ಷವೇ ಜಿಲ್ಲಾಬೋರ್ಡುಗಳಿಗೆ ಚುನಾವಣೆ

ಗಳನ್ನು ನಡೆಸುವದಾಗಿ ತಿಳಿಸಲಾಗಿತ್ತು. ಆ ರೀತಿ ಚುನಾವಣೆಗಳು ನಡೆದಿಲ್ಲ. ರಾಜ್ಯಪಾಲರ ಭಾಷಣಕ್ಕೆ ಪ್ರಾಮುಖ್ಯತೆ ಇದೆ, ಒಂದು ಬೆಲೆ ಇದೆ. ಆ ಬೆಲೆ ಇರಬೇಕೆಂಬುದೇ ನನ್ನ ಅಭಿಪ್ರಾಯ. ರಾಜ್ಯಪಾಲರವರ ಬಗ್ಗೆ ವ್ಯಕ್ತಿಶಃ ನನಗೆ ಗೌರವವಿದೆ. ಸರ್ಕಾರದವರು ತಮ್ಮ ಮುಂದಿನ ಧೋರಣೆಯನ್ನು, ಕಾರ್ಯವನ್ನು ರಾಜ್ಯಪಾಲರವರ ಭಾಷಣದಲ್ಲಿ ಅವರ ಬಾಯಿಂದ ಹೇಳಿಸುತ್ತಾರೆ. ಆದಕಾರಣ ಸರ್ಕಾರದ ಕಾರ್ಯದಬಗ್ಗೆ ವಿರೋಧಿಸಬೇಕಾಗುತ್ತದೆ. ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳನ್ನು ಮಾಡದೇ ಇದ್ದದ್ದು ಹಾಗು ಸಲಹಾ ಸಮಿತಿಗಳನ್ನು ನೇಮಿಸಿದ್ದು ತೀರ ಅನ್ಯಾಯವಾದದ್ದು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಜಿಲ್ಲಾ ಸಲಹಾ ಸಮಿತಿಗಳಿಗೆ ನಾಮಕರಣ ಹೊಂದಿರುವ ಸದಸ್ಯರುಗಳು ತಾವಾಗಿಯೇ ರಾಜೀನಾಮೆ ಕೊಡಬೇಕು. ಸರ್ಕಾರದ ಆದೇಶವನ್ನು ನಿರೀಕ್ಷಿಸುವ ಅಗತ್ಯವಿಲ್ಲ. ನಾಮಕರಣ ಹೊಂದಿದ ಸದಸ್ಯರು ಜಿಲ್ಲಾ ಸಲಹಾ ಸಮಿತಿಗಳಿಗೆ ರಾಜೀನಾಮೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ಪ್ರಜಾಪ್ರಭುತ್ವದ ತತ್ವದಲ್ಲಿ ನಂಬಿಕೆಯಿದ್ದರೆ ಈರೀತಿಯಾಗಿಮಾಡುವುದು ಒಳ್ಳೆಯದು. ಮುಂದೆಯಾದರೂ ಸರ್ಕಾರದವರು ರಾಜ್ಯಪಾಲರ ಬಾಯಲ್ಲಿ ಏನು ಹೇಳಿಸುತ್ತೀರೋ ಅದು ಕಾರ್ಯರೂಪಕ್ಕೆ ಬರುವಂತೆ ಮಾಡುವದು ಸರ್ಕಾರದವರ ಕರ್ತವ್ಯ. ಇಲ್ಲದೇ ಹೋದಲ್ಲಿ ಇಡೀ ಸಂಸ್ಥಾನಕ್ಕೆ ಮರ್ಯಾದೆ ಬರುವುದಿಲ್ಲ.

ಇನ್ನು ರೇಷ್ಮೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ರೇಷ್ಮೆಯ ಕೈಗಾರಿಕೆಯ ವಿಷಯದಲ್ಲಿ ಸರ್ಕಾರದವರು ಪ್ರಗತಿಪರವಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲವೆಂದು ಹೇಳಬೇಕಾಗಿದೆ. ಸಂಬಂಧಪಟ್ಟ ಮಂತ್ರಿಗಳು ಈಗ ಸಭಾಗೃಹದಲ್ಲಿ ಇಲ್ಲ. ಆದುದರಿಂದ ಯಾರಿಗೆ ಹೇಳಬೇಕು ? ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ಕೇಂದ್ರದ ಸಿಲ್ಕ್ ಬೋರ್ಡು ಕಳೆದ ವರ್ಷ 43 ಲಕ್ಷ ರೂಪಾಯಿ ಸಹಾಯಮಾಡಿದೆ. ಅದರಲ್ಲಿನ 30 ಸಾವಿರ ರೂಪಾಯಿ ಸಬ್‌ಸಿಡಿ ಉಳಿದದ್ದನ್ನು ಲೋನ್ ರೂಪದಲ್ಲಿ ಕೊಟ್ಟಿದ್ದಾರೆ. ಅದನ್ನು ಪೂರ್ಣವಾಗಿ ಸರ್ಕಾರದವರು ಉಪಯೋಗಿಸಿಕೊಳ್ಳಲಿಲ್ಲವೆಂಬುದನ್ನು ಕೇಳಿ ವಿಷಾದಪಡಬೇಕಾಗಿದೆ. ನಮ್ಮಲ್ಲಿ ಸುಮಾರು ಎರಡುಲಕ್ಷ ಕಾರ್ಮಿಕರು ಈ ಒಂದು ಗೃಹ ಕೈಗಾರಿಕೆಯಲ್ಲಿ ತೊಡಗಿದ್ದಾರೆ. ಇಡೀ ಇಂಡಿಯಾದಲ್ಲಿ ಈ ಕೈಗಾರಿಕೆಯ ಹೆಚ್ಚು ಭಾಗ ನಂಜನಗೂಡು ಸಬ್-ಡಿವಿಜನ್ನಲ್ಲಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಇಂಥ ಸಂದರ್ಭದಲ್ಲಿ 1956ನೆಯ ಇಸವಿಯಲ್ಲಿ ಜನವರಿಯಲ್ಲಿರಬಹುದು ಅಥವಾ ನವೆಂಬರ್ ತಿಂಗಳಿನಲ್ಲಿ ರೇಷ್ಮೆ ಕೈಗಾರಿಕೆಯನ್ನು ಪ್ರಗತಿದಾಯಕವಾದುದನ್ನಾಗಿ ಮಾಡಬೇಕೆಂಬ ದೃಷ್ಟಿಯಿಂದ ಮತ್ತು ರೇಷ್ಮೆ ವ್ಯವಸಾಯಗಾರರಿಗೆ ಸರಿಯಾದ ಬೆಲೆ ಸಿಕ್ಕಬೇಕೆಂಬ ದೃಷ್ಟಿಯಿಂದ ಆಗಿದ್ದ ಕಾಂಗ್ರೆಸ್ ಸರ್ಕಾರವೇನೆ ಟಿ. ನರಸೀಪುರದಲ್ಲಿರತಕ್ಕ ಕೆಲವು ರೇಷ್ಮೆ ಕೈಗಾರಿಕಾ ಕಾರ್ಖಾನೆಗಳನ್ನು ವಶಪಡಿಸಿಕೊಂಡಿತು. ಆದರೆ ಇವೊತ್ತಿನವರೆಗೂ ಅಲ್ಲಿ ಮಾರ್ಪಾಟುಗಳನ್ನು ಮಾತ್ರ ಏನೂ ಮಾಡಿಲ್ಲ. ವಶಪಡಿಸಿಕೊಂಡು ನಷ್ಟದಲ್ಲೇ ನಡೆಸುತ್ತಿದ್ದಾರೆ. ಈರೀತಿ ನಷ್ಟದಲ್ಲಿ ನಡೆಸುವುದನ್ನು ನಿಲ್ಲಿಸಬೇಕು. ಈಗ ಹಳೆಯದಾಗಿರತಕ್ಕ ಬೇಸಿನ್‌ಗಳಿವೆ. ಅವನ್ನು ಬದಲಾಯಿಸಬೇಕು, ನವೀನರೀತಿಯ ಬೇಸಿನ್ ತಂದು ಉಪಯೋಗಿಸಬೇಕು. ಈಗ ಸುಮಾರು ಎರಡುಸಾವಿರ ಫಿಲೇಚರ್‌ಗಳಿವೆ. ಅವನ್ನು ಜಾಗ್ರತೆಯಾಗಿ ಬದಲಾಯಿಸಬೇಕು ; ಬದಲಾಯಿಸದಿದ್ದರೆ ಉತ್ಪತ್ತಿ ಹೆಚ್ಚುವುದಿಲ್ಲ ಮತ್ತು ಹಾಕಿರುವ ಬಂಡವಾಳ ಸಾರ್ಥಕವಾಗುವುದಿಲ್ಲ, ಈಗಿರತಕ್ಕ ಕೆಲಸಮಾಡುವ ಕೂಲಿಗಾರರಿಗೂ ಸಹಾಯವಾಗುವುದಿಲ್ಲ. ಈ ದಿವಸ ನಿರುದ್ಯೋಗ ಸಮಸ್ಯೆ ತಲೆದೋರುತ್ತಿರುವಾಗ ಸರ್ಕಾರ ಈ ವಿಚಾರದಲ್ಲಿ ತಕ್ಕ ವ್ಯವಸ್ಥೆ ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಅವಿದ್ಯಾವಂತರಲ್ಲೂ ವಿದ್ಯಾವಂತರಲ್ಲೂ ಈಗ ನಿರುದ್ಯೋಗ ತಲೆದೋರುತ್ತಿದೆ ; ಎಲ್ಲಾ ಕ್ಷೇತ್ರಗಳಲ್ಲೂ ನಿರುದ್ಯೋಗವನ್ನು ಯಾವರೀತಿ ನೀಗಬೇಕೆಂಬುದನ್ನು ಯೋಚನೆಮಾಡಿಲ್ಲ. ಗಾಂಧೀಜಿಯವರು ಒಂದುಸಲ ಯಂಗ್ ಇಂಡಿಯಾದಲ್ಲಿ ನಿರುದ್ಯೋಗ ಪರಿಹಾರಕ್ಕೆ ಚರಕಾ ಉಪಯೋಗವೇ ಮುಖ್ಯವಾದ ಮಾರ್ಗವೆಂದು ಬರೆದಿದ್ದರು, ಅದನ್ನೇ ಹೇಳುತ್ತಿದ್ದರು. ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಸಹಾಯವಾಗುವ ಖಾದಿ ಚರಕ, ರೇಷ್ಮೆ ಚರಕ-ಇವೆರಡಕ್ಕೂ ಸಹ ಈಗ ಚಕ್ಕರ್‌ಕೊಟ್ಟಿದ್ದಾರೆ ; ಚರಕಕ್ಕೆ ಚಕ್ಕರ್ ಎಂದು ಈ ದಿವಸ ಗಾದೆ ಕೂಡ ಇದೆ. ಕಾಂಗ್ರೆಸ್ ಸರ್ಕಾರ ಇದಕ್ಕೆ ಅವಕಾಶ ಕೊಡದೆ ನಿಜವಾಗಿಯೂ ನಿರುದ್ಯೋಗವನ್ನು ಈ ದಿವಸವೇ ಪರಿಹಾರಮಾಡಿ ಪರ್‌ಕ್ಯಾಪಿಟ ಇನ್‌ಕಮ್ ಹೆಚ್ಚಿಸಲು ಚರಕ ಪ್ರತಿ ಮನೆಯಲ್ಲೂ ತಿರುಗುವಂತೆ ಏರ್ಪಾಡು ಮಾಡಬೇಕು. ಬದನವಾಳದಲ್ಲಿ ಖಾದಿ ಕೇಂದ್ರವನ್ನು ತೆರೆದಿದ್ದರೂ ಅಲ್ಲಿಗೆ ಸಾಕಷ್ಟು ಹತ್ತಿಯನ್ನು ಸರಬರಾಯಿ ಮಾಡಿ ಸರಿಯಾಗಿ ಕೆಲಸ ನಡೆಯಲು ತಕ್ಕ ಯೋಜನೆಯನ್ನು ಕೂಡ ಮಾಡಿಲ್ಲ. 1927ನೆಯ ಇಸವಿಯಲ್ಲೇ ಯಂಗ್ ಇಂಡಿಯಾದಲ್ಲಿ ಈ ವಿಷಯ ಸೂಚಿಸಲ್ಪಟ್ಟಿತು. ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಚರಕ ತಿರುಗಿಸುವುದಕ್ಕೆ ತಕ್ಕಷ್ಟು ಉತ್ತೇಜನ ಅಗತ್ಯ. ಆದರೆ ಖಾದಿ ಬಟ್ಟೆಯನ್ನೇ ಹಾಕಬೇಕೆಂಬ ಅಭಿಪ್ರಾಯದಿಂದ ಈ ಉತ್ತೇಜನ ಕೊಡಬಾರದು. ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಗ್ರಾಮಾಂತರಗಳಲ್ಲಿ ಚರಕ ಹೆಚ್ಚಾಗಿ ಉಪಯೋಗಿಸುವಂತೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅವಕಾಶಮಾಡಬೇಕು.

ಭಿಕ್ಷುಕರ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಸರಿಯಾದ ವ್ಯವಸ್ಥೆಮಾಡಿಲ್ಲವೆಂದು ಹೇಳಬಹುದು. ಸ್ವಾತಂತ್ರ್ಯಗಳಿಸಿದಾಗ ಭಿಕ್ಷುಕರ ಸಂಖ್ಯೆ ಕಡಮೆ ಮಾಡಬೇಕೆಂದು ಸರ್ಕಾರ ಮಾಡಿದ್ದ ಪ್ರಯತ್ನ ಮುಂದುವರಿಯದೆ ಹಾಗೇ ನಿಂತಿದೆ. ಯಾವ ಊರಿನಲ್ಲಿ ನೋಡಿದರೂ ಬಸ್ ಸ್ಟ್ಯಾಂಡುಗಳಲ್ಲೂ ಮತ್ತು ಬೀದಿಗಳಲ್ಲೂ ಬಿಕ್ಷುಕರ ಸಂಖ್ಯೆ ಹೆಚ್ಚುತ್ತಿದೆ. ಈಗ ಒಂದೇ ರೀತಿಯ ಬಿಕ್ಷುಕರಿಲ್ಲ; ಸೋಮಾರಿತನದಿಂದ ಭಿಕ್ಷುಕರಾಗಿರುವವರಿದ್ದಾರೆ, ಜೀವನೋಪಾಯ ಕಾಣದೆ ಭಿಕ್ಷುಕರಾಗುತ್ತಿದ್ದಾರೆ ಮತ್ತು ಅಂಗವಿಹೀನರಿದ್ದಾರೆ. ಈ ವಿಷಯದಲ್ಲಿ ಜಾಗ್ರತೆ ಸಂಸ್ಥಾನಾಮಳೆ ಭಿಕ್ಷುಕರ ಕಾನೂನೇನಿದೆಯೋ ಅದನ್ನು ಪರಿಣಾಮಕಾರಿಯಾಗುವಂತೆ ಜಾರಿಗೆ ತರಬೇಕು. ಸುಮ್ಮನೆ ಕಾನೂನುಮಾಡಿ ಒಂದು ಮೂಲೆಯಲ್ಲಿಡಬಾರದು. ದೇಶಾದ್ಯಂತ ಪ್ರಚಾರಮಾಡಿ ಕೂಡಲೆ ಸಂಬಂಧಪಟ್ಟ ಕಾನೂನನ್ನು ಜಾರಿಗೆ ತಂದು ಈ ಸಮಸ್ಯೆಯನ್ನು ನಿವಾರಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

Sri V. SRINIVASA SHETTY (Coondapoor).—At the very outset, I should like to say, reading the Address as a whole, it has absolutely no sense of clarity, direction or any sense of urgency. There is nothing of socialism in it. There is much of

(SRI V. SRINIVASA SHETTY.)

confusion in it. I would have very much liked to have seen some clear picture of the programme of the Government in this very important Address. But what I see is, as my friend Sri Madappa said, a mamool Address with scant courtesy and respect to the public in almost every action of the Ministry, as we have seen just now. I should like to say a few words to substantiate my allegation that the Ministry has scant courtesy for the Opposition, for the whole House, for the people as such. They do not care what the Opposition thinks, what the House thinks. One example I could give is the way the answers to questions were given to-day. The first point I should like to bring to the notice of this House is this. One of the most important things is the appointment of the Judges of the High Court. There are two crores of people in the State. For nearly one year, three Judges are struggling, with what success, I do not know. The area of the State has doubled; the litigation has doubled. There were six Hon'ble Judges in this High Court. There are three only at present; one is about to retire. In effect, there are practically only two. When the litigation has doubled, when the area has doubled, and practically the whole work is at a stand-still and when with practically two Judges the High Court is struggling, if the Ministry has any sense of responsibility, any sense of exigency, any sense about the welfare of the whole State, they should have taken some steps. On the other hand, the Hon'ble the Chief Minister took shelter under the protection given by the Constitution or the Rules of Procedure and he was unwilling to give the information when a member asked about the number of Judges that were recommended. The House might remember the confusion and the delay which was caused in selecting the Ministry for the State. Everybody was asking after the election: "What is the matter with Mysore? Is it so very difficult to find a panel of Ministers; how long the Chief Minister should take to select a panel of Ministers? What was the confusion about? Is it due to the vascillating attitude of the Chief Minister? Is it due to the weakened policy of the Chief Minister to find a Ministry or are there other things? Is he the prisoner of his friends? He might have dozen of friends. Does he want to please everybody in the State?" Is it the same case with the High Court also? Sir, if this Ministry has got something to do with the selection of the Judges, it could have recommended a panel long ago. Is there any conflict, Sir, between two branches, two sections of power in the State, one set wanting that it should have their own men, the other set wanting to have their own men?

What is the matter? There must be something shabby, something fishy in the matter of selecting High Court Judges. I know, Sir, the amount of difficulty the clients are experiencing. I am not mindful of the Lawyers; but what about the clients? They must have given up all hopes of seeing the new Judges or the end of their cases. Sir, this is a most important thing that has got to be considered. I very much doubt whether this Ministry has any sense of responsibility with regard to this most important matter. Sir, this matter has been treated with scant courtesy. But what is the alternative to the present Ministry? I am afraid, we may be jumping from the frying pan into fire. The position has deteriorated. There are so many cliques here and I do not know what the fate of Mysore State would be in future. This important matter should have been considered by the Head of the State. But, I do not find anything about this in the Address of the Governor.

Sir, one other point which I would like to stress is about prohibition. Many have already spoken about this and I do not want to dilate much upon it except to say that this policy is being pursued only because of some sentiments. The other day Sri T. T. Krishnamachari was saying in the Parliament that sentiment prevented them from abolishing prohibition. After all, Sir, what is the object of implementing this prohibition policy? As it is said in article 47 of the Constitution, it is only to improve the health of the nation that this prohibition has been introduced

Prohibition is not an end in itself. I ask, Sir, whether prohibition has improved the health of the people. Go to my District—South Kanara. Illicit distillation is an ordinary affair for the people there. It has, more or less, become an industry after prohibition was introduced and everybody is openly selling liquor and people openly drink liquor and there is no objection or obstruction anywhere for this. What about corruption Sir ? The whole police force is hand in glove with the racketeers and bootleggers. Government should have learnt lessons in this matter from what happened to prohibition policy in America, Russia and Sweden. Sir, I do not say that everybody should go on drinking liquor. But, if anybody wants to drink let him drink good liquor and not bad and injurious one. Why do Government allow people to drink bad liquor and spoil their health ? So, Sir, Government have been proceeding on wrong notions and false sentiments. Let them not say, 'because our forefathers believed in it and because Mahatma Gandhi believed in it, we shall go on with it whether there is success or no success.' Let the Government consider whether they could enforce prohibition in the whole of the State. If that is not possible, let them scrap prohibition. Why enforce it in one district and do not do so in another ? So, Sir, let the Government reconsider the whole affair and constitute a committee to go into the whole question. Because in the Central Government certain persons want this, we should not go on with this whether it is wrong or right. I know the Central Government shuts the mouths of the Ministers of the State Governments. They are not able to say whether this policy is wrong or right, or, whether it is working properly or not. So, Sir, let the Government reconsider the whole problem and find outwhether it is working well and if it is not, scrap it completely.

Another important aspect which I want to touch is the question of land reforms. Sir, this question affects nearly 80 per cent of the people in the country. It is one of the aspects in which the Government or those that constitute the Government or the Ruling Party are supposed to be very much interested. Sir, it is all a big fraud. I have got a list of resolutions, Sir, passed by the Congress year in and year out we see the Congress adopting resolutions that land should be distributed to the landless; that tenants should not be evicted and so on. But, what do we see, Sir ? Government have now appointed a Committee. I met the members of this Committee in my place. They are still touring and collecting data and evidence. They may go on doing this for some years. It is nothing but a picnic. This is nothing but evading the issue. Mr. Ramsey Macdonald once said, 'If you want to evade or postpone a certain thing, appoint a committee.' If a committee is appointed, it will take some months to give a report. Then, a Bill would be formulated after two or three years, and that to become a law, it may again take some months or years. Sir, I have put two questions about sharing of the 40 per cent of the produce by the landlord and 60 per cent by the tenant. No rules have been framed in this behalf. No court has been constituted nor have land Tribunals etc., been appointed. What should happen to the landlords and the tenants, Sir? Everything is at a standstill. I represented this to the concerned authorities and they say that they cannot do anything and that they have written in this regard to Government. Is the Government sleeping, Sir ? Is it alive at all? Why does it not move? Some of my friends here were saying that if a petition was presented, it took two or three years to dispose it of. Sir, some persons in my district sent M.O.s, and petitions to the Public Service Commission for forms of application. They got neither the forms nor the money back. This is how petitions or applications are disposed of. In the Assembly, Sir, we have seen the way in which answers are given to questions. Sir, I have got so many things to say, but I will not take much time of the House by dilating on all of them.

One important point which I should like to refer to is with regard

(SRI V. SRINIVASA SHETTY.)

to the tours of the Ministers. Just now I learnt that the Chief Minister is going to Hyderabad to open an elementary school. I do not know whether it is true or not. What is all this, Sir? I have seen six Ministers visiting the same place in my district within a period of one week. We are saying that there is no money for the Plan and there is no money for nation-building schemes. But what about the tours of these Ministers, Sir? During the last elections, two Ministers came to my district at Government cost and toured the whole district. I have put a question as to the number of miles the Ministers have toured till now. I do not know whether that question is going to be answered or not. Sir, what is it that they do during their tours? They receive garlands, utter one or two words and go away. Why do they go there at all, Sir? Is this the practice in the other democratic countries. In England, no Minister goes like this on tours. It is for the officials to tour and know the local conditions. It is only under extraordinary circumstances that a Minister should go to any place. But to open an elementary school, if a Minister goes, it is something unthinkable. Sir, when the Minister visits a place, I see all the district officers maving with them. The R.D.O., the Collector, the D.S.P., all of them will be moving with the Minister. What should happen to their normal work and what will be the expenses to the State if all these Ministers go about touring? And, when somebody wants to see a particular Minister on some important matters and comes here from a long distance, the Minister will not be available, for he would have gone on tour to open an elementary school. Are we going to build a socialistic State? If we proceed in this way I do not know. Sir, the whole thing is in such a confused state. I do not say the address is nonsense . . . .

MR. SPEAKER.—You cannot say so.

SRI V. SRINIVAS SETTY.—I withdraw that word, Sir.

That is the state of affairs. Things ought to move a bit faster. I should like to respect the Chief Minister and the Cabinet and say this is our Ministry. Even though I belong to the Opposition I should like to respect them. But, what respect do they command? As I see, they do not command any respect in this House or outside. I hope that things will improve.

* SRI M. RAMAPPA (Harihar).—Sir, during the course of the debate on the Address it is my duty to comment on the fundamental policies of the Government, but I do not wish to do it for two reasons. The first is that these Ministers and the organisation which they represent are too incompetent and reactionary to change the fundamental policies of the State. I may refer to the manner and method in which the Ministers give answers to the questions of the Hon'ble Members of this House. The uppermost thought in the mind of these Ministers and the organisation which they represent, namely, the Congress, is not the good of the State. Their only thought is how to win the elections, how to come to power, how to continue in power, how to defeat no—confidence motions and how to become successful. They are always thinking as to how to win over the other members so as to continue in power. That is the uppermost thought in their mind. I have been seeing this activity of theirs every day, not only now, but throughout the year. I would like to be very plain on this point. I know that there are some very good friends of mine in this organisation who are engaged in this business of party politics. This is the third term of office of the Congress Ministry after we achieved independence. We have seen so many Ministries. The sword of 'no confidence motion' has been hanging on all these Ministries always. I do not want to criticise only the Ministers, but I would like to vehemently criticise also the organisation which they represent. I mean to say that this organisation is the most incompetent...

SRI J. H. SHAMSUDDIN (Honnawar).—On a point of information. Is the organisation relevant to the debate on the Governor's Address?

Mr. SPEAKER.—I was about to tell the Hon'ble Member Sri Ramappa that the organisation of the Congress is not the point at issue at all. Whatever happens in the Congress does not matter here. Whatever happens in the Government and in the Congress Legislature Party may be relevant to the debate here, but not whatever happens in the organisation of the Congress. The Congress Legislature Party is different from the Congress organisation though it owes its allegiance to the Congress organisation. The Congress Legislature Party may be criticised here. I have no objection to that.

Sri N. RACHIAH (Chamarajanagar S.C.).—The Hon'ble Member said that the organisation and the Ministers are incompetent. It may be that some Ministers may be incompetent. It cannot be said that the organisation is incompetent. The organisation is not incompetent.

Mr. SPEAKER.—The Hon'ble Member can criticise only the Government and the Congress Legislature Party, but not the Congress organisation.

Sri M. RAMAPPA.—Since we are having parliamentary democracy, it means a particular party Government. In my criticism I meant only the Congress Legislature Party, but I was under the impression that I could criticise even the organisation which this Ministry represents.

Mr. SPEAKER.—The Hon'ble Member cannot do that. The Congress organisation is a different entity altogether. The members of the Congress organisation cannot come and defend themselves here. Only the members of the Congress Legislature Party can come here as they are the members of this House and defend themselves if they want. That is why I said that only the Congress Legislature Party can be criticised here and not the Congress organisation.

AN HON'BLE MEMBER.—Inasmuch as the policy of Government is decided by the Congress can we not criticise the Congress policy?

Mr. SPEAKER.—Hon'ble Members may criticise the policy of the Congress so far as it is implemented by the Congress Legislature Party and the Government, but they have no right to criticise the policy of the Congress with which the Congress Legislature Party and the Government are not concerned. The policy of the Congress organisation is not confined to the policy of the Government. The policy of the Congress is much wider than that of the Government. The policy of the Congress may be Ahimsa, this or that, but we are not concerned with all that. We are only concerned with the economic and other policies of the Congress so far as they have been adopted by the Congress Legislature Party and the Government.

Sri M. RAMAPPA.—Then, Sir, I want to point out that on so many matters in which the Government are expected to take very quick, bold and dispassionate decisions, they are wavering for a very long time without coming to a decision. This does not speak good of the Ministers. This also hampers the administration of justice and affects the efficiency of administration.

It is said that we are a secular State, but I find that these Ministers are spreading communalism in the State instead of telling the people that they should be non-communal. It is for the sake of coming to power and remaining in power that they have been doing all this. I am very sorry to tell this very plainly, but this is a fact. I swear that some of these Ministers have been doing this. I do not mean to say that only the present Ministers have been doing this, but almost all the Ministers during the past ten years have been doing this in order to come to power. They are spreading communalism not only among the members of the Legislature but throughout the State. So, in the interests of the younger generation that will take up this responsibility of Government tomorrow, I request them not to spread this communalism at least outside the political circle of their organisation.

As regards the tours of Ministers, I may point out that they are unnecessary. They do not visit a particular place when there is really need. For

(SRI M. RAMAPPA.)

example, Sri Mariappa went to Ranebennur twice and he halted at Kirloskar's Guest House twice. He was requested by the villagers of Beludi Village which was a flood-stricken area and which is only four miles from Kirloskar's Guest House to come to their village, but he did not care to go there. When he could go all the way from Bangalore to Harihar at the time of election to canvass for the Congress candidates, I fail to understand why he did not visit this village which was only four miles from his place of halt. I fail to understand why the Ministers tour unnecessarily when there is no need and do not go to places from which there is a real call from the people. So, it only means that they only go to distant places so that they can draw heavy allowances and do not visit the nearest places even when there is a real need.

Sri H. S. RUDRAPPA.—Sir, I am sure my Hon'ble Colleague, Sri Mariappa, would not have undertaken any tour in his official capacity during the election.

Sri M. RAMAPPA.—That was not my point. I did not say that he undertook the tour in his capacity as a Minister. What I said was that, when he could go all the way from Bangalore to Harihar at the time of election, why could he not visit a village which was only four miles from the place of his halt when he was requested by the villagers of that place to come there.

Mr. SPEAKER.—Does the Hon'ble Member mean that, when a Minister goes on a private tour which is not concerned with Government work, he should go on visiting the villages mentioned by him. It is open to the Minister to visit or not to visit because it is a private tour.

Sri M. RAMAPPA.—It was not on the occasion when he went in his private capacity. He had been to Ranebennur and stayed there in the capacity of a Minister. It was at that time that he was requested to visit that village by the villagers.

Mr. SPEAKER.—Do you mean to say that he went there in the capacity of a Minister?

Sri M. RAMAPPA.—I am not sure.

Mr SPEAKER.—Unless the Hon'ble Member is sure of the fact, what is the use of making such allegations? After all, the Ministers may go on private tours. If they go on official tours and do not attend to these things, the Hon'ble Member has a right to criticise but not otherwise.

Sri U. M. MADAPPA.—Who knows whether he toured in his private capacity or official capacity?

Mr. SPEAKER.—Unless the Hon'ble Member is sure, how can he level allegations?

Sri M. RAMAPPA.—Coming to the amendments proper, I fail to understand how it has not come to the notice of Government that there was a very serious flood havoc in Bhanuvalli as a result of which there was damage to the extent of Rs. 5 lakhs. This fact was published in papers also. As a matter of fact, I visited the affected villages and it is almost impossible to assess the damage at this stage. I really consider it a very serious matter as to how this fact has not come to the notice of the Government. After all, we are concerned with local problems and local difficulties. The loss has been estimated at more than Rs. 10 lakhs and thousands of betel-nut gardens have been washed away. It is not merely a question of loss but the real question is the anxiety of the people who are affected by this havoc. I thought this matter would have come to the notice of Government through its officers and that the Governor would have added a word of sympathy to these affected people in his address and given an assurance of minimum help. I hope that Government will do it at least now.

The next point that I want to touch upon is about unemployment problem. It will not be possible to solve this problem in a very short time and to provide employment for all in a very short time; but let them provide employment equally to all sections of the people. During all these seven or eight years I have been seeing that the appointing authorities provide employment only to their favourites and some sections of the people are really left

out. Of course, an attempt is being made to solve this problem, but the very method is not proper. Employment is not given to all the sections of the community. So, I request the Government to see that all the sections of the community get opportunities for employment equally so far as it is possible.

Sri C. J. MUCKANNAPPA (Gubbi).—What about the other members who have moved amendments? There are three or four members who have been left out. They have sent amendments jointly.

Mr. SPEAKER.—Only one of them will be taken notice of.

Sri C. J. MUCKANNAPPA.—We were under the impression that you, Sir, will give us a chance.

Mr. SPEAKER.—That is not the practice. Only one of them will be given a chance.

ಡಾಕ್ಟರ್ ಸರದಾರ ಬಿ. ಕೆ. ನಾಗೂರು (ವಿಜಾಪುರ).—ಮಾನ್ಯ ಸಭಾಪತಿಗಳೇ, ನಾನು ಮೊದಲನೆ ಸಲ ಸಭೆಯಲ್ಲಿ ಮಾತನಾಡುತ್ತಿರುವುದರಿಂದ ಸಭೆಯ ಕಟ್ಟುನಿಟ್ಟುಗಳು ನನಗೆ ಗೊತ್ತಿಲ್ಲದೇ ಇರುವುದರಿಂದ ಏನಾದರೂ ತಪ್ಪುಗಳಾದರೆ ನನ್ನನ್ನು ಕ್ಷಮಿಸಬೇಕೆಂದು ಮತ್ತು ಯೋಗ್ಯವಾದ ರೀತಿಯಲ್ಲಿ ಮಾತನಾಡುವಂತೆ ನನಗೆ ತಿಳಿಸಿಕೊಡಬೇಕೆಂದೂ ಪ್ರಾರ್ಥಿಸಿಕೊಳ್ಳುತ್ತೇನೆ.

ಇದುವರೆಗೆ ನಮ್ಮ ಕರ್ನಾಟಕ ರಾಜ್ಯಕ್ಕೆ ಮೈಸೂರು ಎಂಬ ಹೆಸರು ಇದ್ದುದು ಬಹಳ ವಿಷಾದಕರ ಸಂಗತಿಯಾಗಿದೆ. ನಮ್ಮ ಕನ್ನಡ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಇರಬೇಕಾದುದು ಉಚಿತ. ಮಹಾತ್ಮಾ ಗಾಂಧಿಯವರು ಕನ್ನಡನಾಡಿಗೆ ಕರ್ನಾಟಕ ಎಂಬ ಹೆಸರನ್ನೇ ತಮ್ಮ ಕಾಂಗ್ರೆಸ್ ಸಂಸ್ಥೆಯಲ್ಲಿ ಇಟ್ಟಿದ್ದಾರೆ. 1947 ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಕರ್ನಾಟಕ ರಾಜ್ಯ ಸ್ಥಾಪನೆಮಾಡುತ್ತೇವೆಂದು ಹೇಳುತ್ತಲೇ ಬಂದಿದ್ದಾರೆ. ಒಂದೇ ಕನ್ನಡ ರಾಜ್ಯ ಸ್ಥಾಪನೆಯಾದರೂ ಕರ್ನಾಟಕ ಎಂಬ ಹೆಸರು ಈ ರಾಜ್ಯಕ್ಕೆ ಬರಲಿಲ್ಲ. ನಮ್ಮ ಕನ್ನಡನಾಡು ಚಿನ್ನದ ನಾಡು. ನಮ್ಮ ಕನ್ನಡನಾಡಿನಲ್ಲಿ ಚಿನ್ನ, ಬಣ್ಣ, ಸುಣ್ಣ ಕಣ್ಣು ಎಲ್ಲವೂ ಸಿಗುತ್ತವೆ. ಇಂಥ ಸಮೃದ್ಧವಾದ ಕನ್ನಡ ನಾಡಿಗೆ ಕರ್ನಾಟಕ ಎಂಬ ಹೆಸರಿನ ಬದಲು ಮೈಸೂರು ಅಂದರೆ ಮಹಿಷಾಸುರ, ಕೋಣನ ಹೆಸರು ಬಂದಿದೆ. ಇನ್ನೂವರೆಗೆ ಕರ್ನಾಟಕ ಎಂಬ ಹೆಸರು ಬದಲಾಗದೆ ಇದ್ದದ್ದು ಬಹಳ ವಿಷಾದಕರವಾದ ಸಂಗತಿ. ಇನ್ನಾದರೂ ವಿಚಾರಮಾಡಿ ಹೆಸರನ್ನು ಬದಲಾವಣೆ ಮಾಡಬೇಕು. ಉತ್ತರ ಕರ್ನಾಟಕ, ಹೈದರಾಬಾದು, ಕೊಡಗು, ಮದರಾಸಿನ ಭಾಗ ಮೈಸೂರು, ಈ ಎಲ್ಲ ಪ್ರದೇಶಗಳು ಸೇರಿ ಈ ನಮ್ಮ ಕನ್ನಡ ರಾಜ್ಯವಾಗಿರುವುದರಿಂದ ಇದಕ್ಕೆ ಪವಿತ್ರವಾದ ಕರ್ನಾಟಕ ಎಂಬ ಹೆಸರು ನಮ್ಮ ರಾಜ್ಯಕ್ಕೆ ತೀವ್ರವಾಗಿ ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಸಕಾಲದಲ್ಲಿ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ ನಾಲ್ಕಾರು ಮಾತುಗಳನ್ನು ಹೇಳುತ್ತೇನೆ. ದಿನಾಂಕ 31 ಮಾರ್ಚಿ 1957 ಆರ್ಡರನ್ನು ಹೊರಡಿಸಬೇಕಾದ್ದನ್ನು ಸಕಾಲದಲ್ಲಿ ಹೊರಡಿಸದೆ ತೊಂದರೆಯಾಯಿತು. ಆಗ ಮೂರು ದಿವಸದ ಪಗಾರವನ್ನು ಮಂತ್ರಿಗಳ ಜೇಬಿನಿಂದ ಕೊಟ್ಟಿದ್ದರೆ ಚೆನ್ನಾಗಿತ್ತು; ಅದನ್ನು ಸರ್ಕಾರದ ಬೊಕ್ಕಸದಿಂದ ಕೊಟ್ಟಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ ಅದು ತಪ್ಪು. ಆ ಮೇಲೆ ಮುಂಬಯಿ ಪ್ರದೇಶದಲ್ಲಿ ಛಾರಿಟಿ ಕಮಿಷನರನ್ನು ನೇಮಕ ಮಾಡಿರುವುದು ದೊಡ್ಡ ತಪ್ಪು. ಇದುವರೆಗೆ ಎಷ್ಟೋ ಕಡೆಯಿಂದ ಅರ್ಜಿ ಬಂದರೂ ನೇಮಕ ಮಾಡದಿರುವುದರಿಂದ ಇಂಥ ಸಣ್ಣ ಪುಟ್ಟ ಲೋಪ ದೋಷಗಳಿಂದ ಜನರಿಗೆ ಯಾವ ರೀತಿ ತೊಂದರೆಯಾಗಿದೆಯೆಂಬುದನ್ನು ಸರ್ಕಾರದವರು ದೂರ ದೃಷ್ಟಿಯಿಂದ ನೋಡಬೇಕಾಗಿದೆ.

ಹೊಸ ಮೈಸೂರು ರಾಜ್ಯದಲ್ಲಿ ಹೈಕೋರ್ಟಿಗೆ ಇನ್ನೂ ಸಾಕಷ್ಟು ನ್ಯಾಯಾಧೀಶರನ್ನು ನೇಮಕ ಮಾಡಿಲ್ಲ. ಹಳೆಯ ಮೈಸೂರಿನಲ್ಲಿ ಆರು ಜನ ನ್ಯಾಯಧೀಶರಿರಬೇಕೆಂದು ನಿಗದಿಯಾಗಿತ್ತು. ಈಗ ಉತ್ತರ ಕರ್ಣಾಟಕ, ಹೈದರಾಬಾದು, ಕೊಡಗು ಈ ಭಾಗಗಳೆಲ್ಲಾ ಸೇರಿರುವ ಹೊಸ ಮೈಸೂರಿಗೆ 9 ಜನ ನ್ಯಾಯಾಧೀಶರಾದರೂ ಸಾಲುವುದಿಲ್ಲ ಎಂಬ ಅಭಿಪ್ರಾಯವಿರುವಾಗ ಕೇವಲ ಮೂರು ಜನ ಮಾತ್ರ ಈಗಿದ್ದಾರೆ. ಮುಂಬಯಿ ಮತ್ತು ಇತರ ಪ್ರಾಂತಗಳಿಂದ ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವ ಕೇಸುಗಳೆಲ್ಲಾ ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ. ಇದರಿಂದ ಅನೇಕ ಕೇಸುಗಳ ತೀರ್ಮಾನ ಸಕಾಲದಲ್ಲಾಗದೆ ಹೆಚ್ಚು ಸಂಖ್ಯೆ ಕೇಸುಗಳು ಪೆಂಡಿಂಗ್ ಆಗಿವೆ. ಎರಡು ತಿಂಗಳಿಗಿಂತ ಹೆಚ್ಚಾಗಿ ಪೆಂಡಿಗ್ ಇಡಬಾರದೆಂದು ಸುಪ್ರೀಂ ಕೋರ್ಟಿನ ಆದೇಶವಿದ್ದರೂ ಸಹ ಏಳೆಂಟು ತಿಂಗಳಿಂದ ಕೇಸುಗಳು ಇತ್ಯರ್ಥವಾಗದಿರುವುದು ನಮ್ಮ ದುರ್ದೈವ. ಇದನ್ನು ಕಾತರತೆಯಿಂದ ವಿಚಾರ ಮಾಡಲೇಬೇಕು. ವಿಧಾನಕ್ಕೆ ಕಾರಣ ಕೇಳಿದರೆ ಹೈಕೋರ್ಟು ನ್ಯಾಯಾಧೀಶರನ್ನು ನೇಮಿಸುವವನು ಭಗವಂತ ಎಂದು ಹೇಳುತ್ತಿದ್ದಾರೆ. ಈ ಸ್ಥಾನಗಳನ್ನು ಭರ್ತಿಮಾಡಲು ಒಂದು ಕಡೆಯಿಂದ ಅಯ್ಯಂಗಾರರ ಶಿಫಾರ್ಸು, ಮತ್ತೊಂದು ಕಡೆಯಿಂದ ಲಿಂಗಾಯಿತರ ಶಿಫಾರ್ಸು, ಇನ್ನೊಂದು ಕಡೆಯಿಂದ ಬ್ರಾಹ್ಮಣರ ಶಿಫಾರ್ಸು ಇರುವುದರಿಂದ ನೇಮಕವಾಗದೆ ಹಾಗೆಯೇ ಉಳಿದಿದೆಯೆಂದು ಹೇಳುತ್ತಾರೆ. ಮೈಸೂರು ರಾಜ್ಯಕ್ಕೆ, ನೂತನ ಕರ್ಣಾಟಕಕ್ಕೆ ಮಹಾತ್ಮಾ ಗಾಂಧಿಯವರ ಆಶೀರ್ವಾದವೇನಿದೆಯೋ ಅದಕ್ಕೆ ಲೋಪ ಬರಬಾರದೆಂಬ ಉದ್ದೇಶದಿಂದ, ಶಿಫಾರ್ಸಿಗೆ ಕಟ್ಟುಬಿದ್ದು ವಿಧಾನಮಾಡಬಾರದು, ಲೋಪದೋಷಕ್ಕೆಡೆ ಕೊಡಬಾರದೆಂಬ ಅಭಿಪ್ರಾಯದಿಂದ ನಾನು ಈ ವಿಚಾರ ಹೇಳುತ್ತಿದ್ದೇನೆ. ಜನರಿಗೆ ಹೆಚ್ಚು ತೊಂದರೆಯುಂಟಾಗವ ಪರಿಸ್ಥಿತಿಯಿರುವುದರಿಂದ ಆದಷ್ಟು ತೀವ್ರವಾಗಿ ನ್ಯಾಯಾಧೀಶರ ನೇಮಕವಾಗಲೇಬೇಕು.

ನಮ್ಮ ನೂತನ ಮೈಸೂರಿನಲ್ಲಿ ಯಾವುದನ್ನು ಯಾವ ರೀತಿಯಾಗಿ ಮಾಡಬೇಕೆಂಬುದೇ ತಿಳಿಯದೆ ಕೆಲಸ ಜರುಗುತ್ತಿದೆ. ಇದನ್ನು ನೋಡಿದರೆ ಭಯವಾಗುತ್ತದೆ. 8 ಜಿಲ್ಲೆಗಳಲ್ಲಿ ಪಾನ ನಿರೋಧವಿಲ್ಲ, 8 ಜಿಲ್ಲೆಗಳಲ್ಲಿ ಕುಡಿಯುವುದಕ್ಕೆ ಅವಕಾಶವಿದೆ. ಒಂದು ಕಡೆ ಗಂಡಸು ರೂಪದ ದೇವರು ಅರ್ಧನಾರಿ ನಟೇಶ್ವರ ಇನ್ನೊಂದುಕಡೆ ಹೆಂಗಸು ರೂಪದ ದೇವರು ಇರುವ ಹಾಗಿದೆ. ಇದು ಮಾತ್ರ ಶುದ್ಧತಪ್ಪು ಎಂದು ಹೇಳುತ್ತಿದ್ದೇನೆ. ಸ್ವಾತಂತ್ರ್ಯ ಬಂದನಂತರ ಕಾಂಗ್ರೆಸ್ ತಾನು ಹೇಳುತ್ತಿದ್ದಂತೆ ಏನು ತಾನೆ ಮಾಡಿದೆ,

(ಡಾಕ್ಟರ್ ಸರದಾರ ಬಿ. ಕೆ. ನಾಗೂರು.)

ಮಹಾತ್ಮಾ ಗಾಂಧಿ ಪಾನನಿರೋಧ ಮಾಡಬೇಕೆಂದು ಹೇಳಿದ್ದರೂ ಅದನ್ನು ಪೂರ್ಣವಾಗಿ ಜಾರಿಗೆತಂದಿಲ್ಲ ಎಂದು ಜನ ಹೇಳುತ್ತಿದ್ದಾರೆ. ಇದರಿಂದ ಆಗುವ ಪರಿಣಾಮವೇನೆಂಬುದನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಬೇಕು. ಮುಂಬಯಿಯಲ್ಲಿ 13 ಕೋಟಿ ರೂಪಾಯಿ ನಷ್ಟವಾಗಿದೆಯೆಂದು ತಿಳಿದಿದೆ, ಇಲ್ಲಿ ಎಷ್ಟು ಕೋಟಿ ರೂಪಾಯಿ ನಷ್ಟವಾಗುತ್ತಿದೆ ಯೆಂಬುದು ಗೊತ್ತಿಲ್ಲ. ಪಾನ ನಿರೋಧ ಇಲ್ಲಿ ಜಯಪ್ರದವಾಗಿಲ್ಲ. ಬಿಜಾಪುರದಲ್ಲಿ ಚುನಾವಣೆ ಕಾಲದಲ್ಲಿ ಕುಡಿಯಲು ನೀರು ಸಿಕ್ಕದೆ ಬಟ್ಟಿಸಾರು ಮಾತ್ರ ಸಾಕಷ್ಟು ಹರಿಯಿತು, ಹೋಟಲುಗಳಿಗೆ ಹೋಗಬೇಕಾಯಿತು. ಅನುಕೂಲಸ್ತರು, ಅಧಿಕಾರಿಗಳು ಪಾನ ನಿರೋಧವಿರುವ ಕಡೆ ಕುಡಿಯುತ್ತಿದ್ದರೆ ಅವರನ್ನು ಶಿಕ್ಷಿಸದೆ ಕೇವಲ ಬಡವರನ್ನು ಹಿಡಿದು ಕೇಸು ಹಾಕಿ ತಪ್ಪಿತಸ್ತರ ಮೇಲೆ ಕ್ರಮ ಕೈಕೊಳ್ಳುತ್ತಿರುವುದಾಗಿ ಹೇಳುತ್ತಾರೆ. ಪಾನ ನಿರೋಧವನ್ನು ಯಶಸ್ವಿಯಾಗಿ ನಡೆಸಲು ಶಕ್ತಿಯಿಲ್ಲವಾಗಿದೆ. ಹಿಂದೆ ವೇದಗಳ ಕಾಲದಿಂದ ಸುರಾಪಾನ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಇದರಂತೆ ಇಸ್ಪೀಟಾಡುವುದು, ಜೂಜಾಡುವುದು ಅನೇಕ ಕಡೆ ಇದೆ. ಕಾನೂನು ಪ್ರಕಾರ ಅದನ್ನು ಸರಿಯಾಗಿ ತಡೆಗಟ್ಟುತ್ತಿಲ್ಲ. ಬೆಂಗಳೂರಿನಲ್ಲಿ ಕುದುರೆ ಜೂಜುನಡೆಯುತ್ತಿದೆ, ಎಲ್ಲರ ಬಾಯಲ್ಲೂ ಇದೇ ಮಾತು ಕೇಳಿಬರುತ್ತಿದೆ, ಸರ್ಕಾರ ಲೈಸನ್ಸ್ ಕೊಟ್ಟುನಡೆಸುತ್ತಿದ್ದಾರೆ. ಅದೇ ಬೇರೆಕಡೆ ಜೂಜಾಡಿದರೆ ಶಿಕ್ಷೆ ಮಾಡುತ್ತಾರೆ. ಕಾಯಿದೆ, ರೀತಿನೀತಿ ಕಾನೂನಿನ ಅನ್ವಯ ಎಲ್ಲಾಕಡೆಗೂ ಒಂದೇ ವಿಧವಾಗಿದ್ದರೆ ಒಳ್ಳೆಯದು; ಇಲ್ಲದಿದ್ದರೆ ಜನರಿಗೆ ಸರ್ಕಾರದಲ್ಲಿ ವಿಶ್ವಾಸವಿರುವುದಿಲ್ಲ. ಈ ದೃಷ್ಟಿಯಿಂದ ಪಾನ ನಿರೋಧವನ್ನು ಎಲ್ಲಾ ಕಡೆಯಲ್ಲೂ ಜಾರಿಗೆ ತರಬೇಕು ಇಲ್ಲವೇ ಪಾನ ಪ್ರತಿಬಂಧ ತೆಗೆಯಬೇಕು. ಅನೇಕ ಕಡೆ ಪ್ರತಿ ಮನೆಯಲ್ಲೂ ಕಳ್ಳಬಟ್ಟಿ ಇಳಿಸುತ್ತಿದ್ದಾರೆ, ಇದಕ್ಕೆ ಆಸ್ಪದ ವಿಡಬಾರದು. ಸರ್ಕಾರಕ್ಕೆ ಬರುವ ರೊಕ್ಕ ಕಳೆದುಕೊಂಡು ಪಾನ ನಿರೋಧಜಾರಿಗೆ ತಂದಿರುವಾಗ ದೇಶದಲ್ಲೆಲ್ಲಾ ಒಂದೇ ವಿಧವಾದ ನೀತಿಯನ್ನನುಸರಿಸಬೇಕು. ಈಗ ಅನುಸರಿಸುತ್ತಿರುವ ನೀತಿ ಸರಿಯಾಗಿರುವುದಿಲ್ಲ.

ಬಿಜಾಪುರ ಜಿಲ್ಲೆಗೆ ಯಾವ ಅನುಕೂಲತೆಯನ್ನೂ ಮಾಡಿಕೊಟ್ಟಿಲ್ಲ. ಅಲ್ಲಿ ನೈಸರ್ಗಿಕ ಸಂಪತ್ತಿದೆ, ನಾಲ್ಕು ನದಿಗಳಿವೆ, ಒಂದು ಡೋಣಿಯಿದೆ. ಆ ನೀರನ್ನು ಉಪಯೋಗಿಸಲು, ಇರುವ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಲು ಅನುಕೂಲಮಾಡಿ ಕೊಟ್ಟರೆ ಬೇಕಾದಷ್ಟು ದವಸಧಾನ್ಯಗಳನ್ನು ಬೆಳೆದು ಇಡಿ ದೇಶಕ್ಕೆ ಒದಗಿಸಲು ಅವಕಾಶವಿದೆ, ಈ ವಿಚಾರವನ್ನು ಗಮನಿಸಿ ಅಲ್ಲಿಗೆ ತಕ್ಕ ಸೌಕರ್ಯಗಳನ್ನೊದಗಿಸಬೇಕಾದದ್ದು ಆವಶ್ಯಕ.

ಮಾನ್ಯ ಮಂತ್ರಿಗಳು ನಮ್ಮ ಕಡೆ ಪ್ರವಾಸ ಬರುವುದು, ಹೋಗುವುದು ಅನೇಕರಿಗೆ ತಿಳಿಯುವುದೇ ಇಲ್ಲ. ಬಂದಿದ್ದಾರೆಂಬುದು ತಿಳಿದು ಜನರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುವಷ್ಟರಲ್ಲಿ ವಾಪಸು ಹೊರಟು ಹೋಗಿರುತ್ತಾರೆ. ಇದು ಸರಿಯಲ್ಲ. ಜನರಿಗೆ ಮಂತ್ರಿಗಳು ಬರುವುದು ಗೊತ್ತಾಗಬೇಕು, ಅವರು ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಿರಬೇಕು, ಇಲ್ಲದಿದ್ದರೆ ಮಂತ್ರಿಗಳ ಪ್ರವಾಸದಿಂದ ಸಾಕಷ್ಟು ಪ್ರಯೋಜನವಾಗಲಾರದು.

ಇನ್ನೊಂದು ವಿಚಾರ ಮನಸ್ಸಿನಲ್ಲಿ ನೊಂದುಕೊಂಡು ಹೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ದೊಡ್ಡ ದೊಡ್ಡ ಬಂಗಲೆಗಳಿವೆ. 30 ಜನ ಸದಸ್ಯರಿಗೆ ಸಾಕಾಗುವಷ್ಟು ಜಾಗವಿರುವ ಒಂದೊಂದು ಬಂಗಲೆಯಲ್ಲಿ ಮಂತ್ರಿಗಳೊಬ್ಬರೇ ವಾಸಮಾಡುತ್ತಿದ್ದಾರೆ. ಮಹಡಿಯ ಮೇಲೆ ಒಬ್ಬರು ಕೆಳಗೆ ಒಬ್ಬರು ಈ ರೀತಿಯಾದರೂ ಇರಬಹುದಾಗಿತ್ತು. ಹಾಗಿಲ್ಲದೆ ಈಗ ಈ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಏಕೆಂದರೆ, ಅತ್ತಿಂದಿತ್ತ ಜಾತ್ರೆಯೊಳಗೆ ಓಡಾಡುವಾಗ ಸಣ್ಣ ಹುಡುಗರನ್ನು ಕಳೆದುಕೊಂಡು ಹುಡುಕುತ್ತಾ ಅಡ್ಡಾಡುವುದನ್ನು ನಾವು ನೋಡಿದ್ದೇವೆ. ಅವರ ಸ್ಥಿತಿ ನಮ್ಮದೂ ಆಗಿದೆ. ಇಲ್ಲಿ ತಮಗಾದರೋ ದೊಡ್ಡ ದೊಡ್ಡ ಬಂಗಲೆಗಳಿವೆ. ಅವನ್ನೇನೂ ಬಿಟ್ಟುಕೊಡಬೇಕೆಂದು ನಾವು ಹೇಳುವುದಿಲ್ಲ. ನಿಮ್ಮಂತೆಯೇ ಮಿಕ್ಕವರಿಗೂ ಎಲ್ಲಾದರೂ ಉಳಿದುಕೊಳ್ಳುವುದಕ್ಕೆ ಅನುಕೂಲವಾಗುವ ಹಾಗೆ ಮಾಡಿಕೊಟ್ಟರೆ ಒಳ್ಳೆಯದು.

ಇನ್ನೊಂದೇನೆಂದರೆ ಚುನಾವಣೆಗಳಾಗಿ ಈಗಾಗಲೇ ಎರಡು ತಿಂಗಳಮೇಲಾಯಿತು. ಇಷ್ಟು ದಿವಸಗಳವರೆಗೂ ಈ ಬಜೆಟ್ ಅಧಿವೇಶನವನ್ನು ಕರೆಯದಿರುವುದಕ್ಕೆ ಕಾರಣ ಗೊತ್ತಿಲ್ಲ. ಇದನ್ನು ಬೇಗನೆ ಕರೆಯದೆ ಯಾವಾಗ ನೋಡಿದರೂ ಮಂತ್ರಿದ್ವಯರು, ಮಂತ್ರಿತ್ರಯರು ಒಟ್ಟಿಗೆ ಸೇರಿಕೊಂಡು ಲಗ್ನ ಮಹೂರ್ತಗಳನ್ನೇ ಮುಖ್ಯವೆಂದು ಭಾವಿಸುತ್ತಾ ಓಡಾಡಿಕೊಂಡಿದ್ದಾರಲ್ಲಾ ಎಂದು ನನಗೆ ಬಹಳ ವಿಷಾದವಾಗುತ್ತದೆ.

ಅದಕ್ಕೆ ಸರಿಯಾಗಿ ಇಲ್ಲಿ ಆಫೀಸ್ ಕಚೇರಿಗಳಲ್ಲಿ ನೋಡಿದರೆ ಯಾವಾಗ ನೋಡಿದರೂ ಫೋಟೋಗಳನ್ನಿಟ್ಟುಕೊಂಡು ಪೂಜೆ ಪೂಜೆ ಎಂದು ಓಡಾಡುತ್ತಿದ್ದಾರೆ. ಯಾವ ಕಾಗದಕ್ಕೂ ಉತ್ತರವೇ ಇಲ್ಲ. ಆಫೀಸುಗಳಲ್ಲಿ ಹೀಗೆ ಪೂಜೆನಡೆಸುವುದನ್ನು ನಾನು ಎಲ್ಲೂ ಕಂಡಿಲ್ಲ. ಮದರಾಸಿನಲ್ಲಿ ಹೇಗೆ ಕೆಲಸ ನಡೆಯುತ್ತಿತ್ತೆಂಬುದಕ್ಕೆ ಜನ ಆಡಿಕೊಳ್ಳುತ್ತಾ ಹೇಳುತ್ತಿದ್ದರು. Apply apply ; no reply ಬೊಂಬಾಯಿನಲ್ಲಾದರೋ today apply' tomorrow reply ಎಂದು. ಈಗ ನಮ್ಮ ಮೈಸೂರು ಸರ್ಕಾರದಲ್ಲಿ ಏನಿದೆ ಎಂದರೆ, ಈ ಹೊತ್ತು ಒಂದು ಪತ್ರಬರೆದು ಹಾಕಬೇಕು, ಅತ್ತ ಕಾಶಿ-ರಾಮೇಶ್ವರದ ಯಾತ್ರೆಹೊರಟು ಮುಗಿಸಿಕೊಂಡು ಬರುವ ಹೊತ್ತಿಗೆ ಉತ್ತರ ಬರುತ್ತದೆಂದು ಹೇಳಲಿಕ್ಕಾಗದು. ಲಕ್ಷ್ಮಿ ಸರಸ್ವತಿಯರ ಪೂಜೆ ಮಾತ್ರ ಬಿಡುವಿಲ್ಲದೆ ನಡೆಯುತ್ತಿರುತ್ತದೆ. ಹೀಗಿದ್ದರೆ ಸರ್ಕಾರಿ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ನಡೆದಾವು ದೇವರಕೆಲಸ—ಸರ್ಕಾರದ ಕೆಲಸ ! ಎಂದು ಬೋರ್ಡ್ ಮೇಲೆಯೇನೋ ಇದೆ. ಆಫೀಸಿರುವುದು ಪೂಜೆಗೇ ? ನಮ್ಮಲ್ಲೂ ದೇವರ ಮನೆ, ಪೂಜಾವಳಿ ಎಲ್ಲಾ ಇದೆ. ಆದರೆ ದೇವರ ಪೂಜೆ ಮಾಡಬೇಕಾದರೆ ಮನೆಯಲ್ಲಿ ಅದಕ್ಕೆ ಸ್ಥಾನ. ಆಫೀಸಿನಲ್ಲಿ ಮಾಡುವುದನ್ನು ನೋಡಿದರೆ ಬೈರಾಗಿಗಳು ಮೇಲೆ ನಾನಾ ವೇಷಹಾಕಿಕೊಂಡು ಮೇಲೆನೋಡುವುದಕ್ಕೆ ಮಹಾತ್ಮರಂತೆ ಜಪಸರ ಹಿಡಿದುಕೊಂಡಿರುತ್ತಾರೆ. ಒಳಗೆ ಎಷ್ಟೋ ದುಷ್ಕರ್ಮಗಳನ್ನು ಮಾಡುತ್ತಿರುತ್ತಾರೆ ಒಳಗೆ ದಾರ ಮೇಲೆ ಮಣಿ ಎರಡನೆಯವರ ಗಂಟಿಗೆ ನಾನೆ ದಣಿ, ಅನ್ನುವಬೈರಾಗಿಯಂತೆ ಆಗಿದೆ. ಅಂಥವರ ನೆನಪು ಬರುತ್ತದೆ. ಆದಷ್ಟುಮಟ್ಟಿಗೆ ಇದನ್ನೆಲ್ಲಾ ತಪ್ಪಿಸಿ ಸಾರ್ವಜನಿಕ ಕೆಲಸ ಬೇಗ ನಡೆಯುವಂತೆ ಮಾಡಬೇಕೆಂದು ಆಶಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಬದರಿನಾರಾಯಣ್ (ತೀರ್ಥಹಳ್ಳಿ).—ಮಾನ್ಯ ಸಭಾಪತಿಗಳೇ, ಮೊನ್ನೆತಾನೆ ಮೈಸೂರು ಸಂಸ್ಥಾನದ ರಾಜ್ಯಪಾಲರು ಮಾಡಿದ

ಭಾಷಣವನ್ನು ನಾವು ಕೇಳಿದ್ದೇವೆ. ಆ ಭಾಷಣದಲ್ಲಿ ರಾಜ್ಯಪಾಲರು ದೇಶದ ನಾನಾ ವಿಚಾರಗಳನ್ನು ಪರಿಶೀಲಿಸಿ ಆ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಂಡಿರುವುದನ್ನು ಹೇಳಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆ, ಆಹಾರದ ಏರಿಕೆಯ ಬಗ್ಗೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮ, ಭೂಸುಧಾರಣೆಯ ಬಗ್ಗೆ ಸರ್ಕಾರದವರು ನೇಮಕ ಮಾಡಿರತಕ್ಕ ಸಮಿತಿ, ರೆವಿನ್ಯೂ ಮತ್ತು ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯುನಲ್ ಏರ್ಪಡಿಸಿರುವುದು, ಇತ್ಯಾದಿ ಅನೇಕ ವಿಚಾರಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರುಗಳು ಕೆಲವರು ಅವುಗಳನ್ನು ಸ್ವಾಗತಿಸಿದ್ದಾರೆ, ಮತ್ತೆ ಕೆಲವರು ಟೀಕಿಸಿದ್ದಾರೆ. ನಾನೀಗ ಮುಖ್ಯವಾಗಿ ಈ ಭಾಷಣದಲ್ಲಿ ಪ್ರಸ್ತಾಪಿಸಿರುವ ಎಲ್ಲ ವಿಷಯಗಳಿಗೂ ಹೋಗದೆ, ವಿರೋಧ ಪಕ್ಷದವರು ಎತ್ತಿರುವ ಕೆಲವು ಆಕ್ಷೇಪಣೆಗಳಿಗೆ ನನ್ನ ಅಭಿಪ್ರಾಯವನ್ನು ಸೂಚಿಸುತ್ತ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಪ್ರಥಮತಃ, ಮಲೆನಾಡಿನವನಾಗಿ ನಾನು, ಈ ರಾಜ್ಯಪಾಲರ ಭಾಷಣದಲ್ಲಿ ಇಡೀ ಮೈಸೂರು ಪ್ರಾಂತ್ಯಕ್ಕೇ ಬಹಳ ಪ್ರಾಮುಖ್ಯ ಪ್ರದೇಶವಾದಂಥ ಹಾಗೂ ಹೆಚ್ಚಿನ ಸಂಪದ್ಯುಕ್ತವಾದ ಮಲೆನಾಡಿನ ವಿಚಾರದಲ್ಲಿ ಯಾವ ಅಂಶವನ್ನೂ ಕೂಡ ಪ್ರಸ್ತಾಪಿಸಿಲ್ಲವಲ್ಲಾ ಎಂದು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರೇ ಮೂರು ಮಲೆನಾಡು ಸಮ್ಮೇಳನಗಳ ಅಧ್ಯಕ್ಷರಾಗಿ ಹಾಗೂ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ, ಅವರು ಬಯಲು ನಾಡಿನ ಜನರಾದರೂ ಮಲೆನಾಡು ಜನರ ವಿಷಯದಲ್ಲಿ ಬಹಳ ಶ್ರದ್ಧೆ, ಆಸಕ್ತಿ ವಹಿಸಿ ಕೆಲಸ ಮಾಡಿದವರಾಗಿದ್ದಾರೆ. ಈ ಬೆಳಗ್ಗೆ ಒಂದು ಉಪಪ್ರಶ್ನೆಗೆ ಉತ್ತರ ಕೊಡುತ್ತಾ ಮಲೆನಾಡಿನ ಬಗ್ಗೆ ಒಂದು ಪ್ರತ್ಯೇಕ ಖಾತೆಯನ್ನು ಮಾಡಲಾಗಿದೆ ಮತ್ತು ಒಂದು ಪ್ರತ್ಯೇಕ ನಿಧಿಯನ್ನೇ ಏರ್ಪಡಿಸಿದೆಯೆಂದು ಹೇಳಿದರು. ಆದರೆ ನಿನ್ನೆಯ ದಿವಸ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮಲೆನಾಡು ಅಭಿವೃದ್ಧಿಯಾಗಬೇಕಾದರೆ ಏನೇನು ಮಾಡಬೇಕು, ತಾವೇನು ಮಾಡಿದ್ದೀರಿ, ಮಲೆನಾಡು ಅಭಿವೃದ್ಧಿಯ ಸಮಿತಿಯ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು ಎಂಬುದಕ್ಕೆ ಅದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆಯೆಂದು ಹೇಳಿದರು. ಬಹುಶಃ ಈ ದಿವಸ ಚರ್ಚೆಗೆ ಉತ್ತರ ಕೊಡುವಾಗ ಈ ಅಂಶವನ್ನು ಸ್ಪಷ್ಟೀಕರಿಸಿ ಮಲೆನಾಡು ಅಭಿವೃದ್ಧಿ ಸಮಿತಿಯನ್ನು ಮಾಡುವ ತೀರ್ಮಾನವನ್ನು ತಿಳಿಸುತ್ತಾರೆಂದು ನಂಬಿದ್ದೇನೆ. ಪ್ರಾಯಶಃ ಮಲೆನಾಡು ತಾಲ್ಲೂಕುಗಳಲ್ಲಿ ಮಾಮೂಲಾದ ಕೆಲಸ ನಡೆಸಿದಾಗ ಮಲೆನಾಡು ಅಭಿವೃದ್ಧಿಯೂ ಆಗುತ್ತದೆಂದು ಅಭಿಪ್ರಾಯ ಪಟ್ಟುಕೊಂಡಿರಬಹುದು. ಅದು ಸರಿಯಲ್ಲ. ಮಲೆನಾಡಿನ ವಿಚಾರದಲ್ಲಿ ತನ್ನದೇ ಒಂದು ವೈಶಿಷ್ಟ್ಯವುಳ್ಳಂಥ ಅನೇಕ ಸಮಸ್ಯೆಗಳಿವೆ. ಮಲೆನಾಡೆಂಬ ದೃಷ್ಟಿಯಿಂದಲೇ ಕೆಲವು ಪರಿಹಾರಗಳನ್ನು ಕೊಡಬೇಕಾಗಿದೆ. ಮಲೆನಾಡಿನ ಪುರೋಭಿವೃದ್ಧಿಯ ಅವಶ್ಯಕತೆ ಬಹಳವಾಗಿದೆಯೆಂಬುದನ್ನು ಮುಖ್ಯಮಂತ್ರಿಗಳು ಅರಿತಿದ್ದಾರೆ. ಜೊತೆಗೆ ಈ ಖಾತೆ ಅವರಿಗೇ ಸೇರಿರುವುದರಿಂದ ಅವರು ಹೆಚ್ಚಿನ ಗಮನ ಕೊಟ್ಟು ಮಲೆನಾಡಿನ ಅಭಿವೃದ್ಧಿಗೆ ವಿಶೇಷ ಸಹಾಯ ಮಾಡುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ ನಮ್ಮ ಮಲೆನಾಡು ಪ್ರಾಂತ್ಯದ ವಿಚಾರವಾಗಿ ಹೇಳುವುದಾದರೆ, ಅಲ್ಲಿನ ಪ್ರದೇಶದಲ್ಲಿ ಉನ್ನತಿಗೋಸ್ಕರ ಅನೇಕ ಸಾವಿರಾರು ಎಕರೆ ಬಾಗಾಯಿತು ಪ್ರದೇಶವನ್ನೂ ಹತ್ತಾರು ಸಾವಿರ ಎಕರೆ ತರೀ ಪ್ರದೇಶವನ್ನೂ ನೂರಾರು ಎಕರೆಗಳುಳ್ಳಂಥ ಖುಷ್ಕಿ ಪ್ರದೇಶವನ್ನೂ ಬಿಟ್ಟುಬಿಟ್ಟು ಸುಮಾರು ಮೂರು ಸಾವಿರ ಮನೆಯವರು ಹೊರಗೆ ಹೋಗಬೇಕಾಗಿದೆ. ಆದರೆ ನಾವಿನ್ನೂ ನಿರಾಶ್ರಿತರ ಕಡೆಗೆ ಹೆಚ್ಚು ಗಮನ ಕೊಡುತ್ತಿರುವ ಕಾಲದಲ್ಲಿಯೇ ಇದ್ದೇವೆ. ಭಾರತದಲ್ಲಿ ಅನೇಕ ಕಡೆಗಳಿಂದ ಬಂದು ಇಲ್ಲಿ ನೆಲಸತಕ್ಕ ನಿರಾಶ್ರಿತರಿಗೆ ಬೇಕಾದಷ್ಟು ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದೇವೆ, ಇಂಡಿಯಾ ಸರ್ಕಾರದವರೂ ಒದಗಿಸಿಕೊಟ್ಟಿದ್ದಾರೆ ಮತ್ತು ಪ್ರಾಂತೀಯ ಸರ್ಕಾರಗಳವರೂ ಒದಗಿಸಿಕೊಟ್ಟಿದ್ದಾರೆ. ಆದರೆ ಅನೇಕರು ದೇಶಾಭಿವೃದ್ಧಿಗೋಸ್ಕರ ತಮ್ಮ ಮನೆ ಮಠಗಳನ್ನು ಬಿಟ್ಟುಕೊಟ್ಟು ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದಾರೆ. ನಿರಾಶ್ರಿತರನ್ನು ಬೇರೆ ಕಡೆ ಕಳಿಸುವ ವಿಷಯದಲ್ಲಿ ಸರ್ಕಾರದವರು ಯಾವ ರೀತಿ ಗಮನ ಕೊಡುತ್ತಾರೋ ಅದೇ ರೀತಿ ಜಮೀನು ಮುಳುಗಡೆಯಿಂದುಂಟಾದ ಪ್ರದೇಶಗಳಿಂದ ಬೇರೆ ಪ್ರದೇಶಗಳಿಗೆ ಜನರನ್ನು ಕಳಿಸುವ ವಿಷಯದಲ್ಲಿಯೂ ಸರ್ಕಾರದವರು ಒಂದು ಸರಿಯಾದ ಧೋರಣೆಯಿಂದ ಯಾವ ನೀತಿಯನ್ನು ಹಾಕಿಕೊಳ್ಳಬೇಕೆಂಬುದನ್ನು ನಾನು ಹೇಳಬೇಕಾಗಿಲ್ಲ. ನಾನೂ ಮುಳುಗಡೆ ಪ್ರದೇಶಗಳ ಒಂದು ಸಮಿತಿಯಲ್ಲಿ ಸದಸ್ಯನಾಗಿದ್ದೆ. ಅಲ್ಲಿ ಮೊನ್ನೆ ನಡೆದ ಮೀಟಿಂಗ್‌ನಲ್ಲಿ ಅಧ್ಯಕ್ಷರಾಗಿದ್ದ ನನ್ನ ಮಾನ್ಯ ಮಿತ್ರರಾದ ಪಬ್ಲಿಕ್ ವರ್ಕ್ಸ್ ಶಾಖಾಮಂತ್ರಿಯವರಾದ ಶ್ರೀ ವೀರಣ್ಣಗೌಡರು ಈ ವಿಚಾರದ ಬಗ್ಗೆ ಸರ್ಕಾರದ ಸಹಾನುಭೂತಿಯನ್ನು ತೋರಿಸಿ ಅವರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಏರ್ಪಾಡು ಮಾಡುತ್ತಾರೆಂದು ಭರವಸೆಯನ್ನು ಕೊಟ್ಟಿದ್ದಾರೆ. ಅವರಿಗೆ ಬರೀ ಪರಿಹಾರವನ್ನು ಕೊಡುವುದೇ ಅಲ್ಲದೆ ಅವರಿಗೆ ಬೇಕಾದಷ್ಟು ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಹೆಚ್ಚಿನ ಮಟ್ಟದಲ್ಲಿ ಮತ್ತು ಉತ್ತಮ ಸ್ಥಿತಿಯಲ್ಲಿ ಅವರನ್ನು ಅಭಿವೃದ್ಧಿಗೆ ತರಲು ಪ್ರಯತ್ನ ಮಾಡುತ್ತೇವೆಂದೂ ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟು ಒಂದು ಆದರ್ಶವಾದ ರೀತಿಯಲ್ಲಿ ಪುನರ್ವ್ಯವಸ್ಥಾ ಕ್ರಮವನ್ನು ಹಾಕಿಕೊಳ್ಳುತ್ತಾರೆಂದು ನಾನು ನಿರೀಕ್ಷಣೆ ಮಾಡಬೇಕಾಗಿದೆ.

ದೇಶದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಎಂದರೆ, ನಿರುದ್ಯೋಗ ಸಮಸ್ಯೆ ಬಹಳವಾಗಿದೆ ಎನ್ನುವುದನ್ನು ನಾವು ಪ್ರತಿಕ್ಷಣದಲ್ಲಿಯೂ ಕಾಣುತ್ತಿದ್ದೇವೆ. ನಾನು ಶಿವಮೊಗ್ಗದಲ್ಲಿ ಇದ್ದಾಗ ನನ್ನ ಹತ್ತಿರ ಮತ್ತು ನನ್ನ ಸ್ನೇಹಿತರ ಹತ್ತಿರ ಅನೇಕ ಜನರು ಬಂದು ಕೆಲಸ ಕೊಡಿಸಿಕೊಡಬೇಕು ಎಂದು ಕೇಳುತ್ತಿದ್ದರು. ನಿರುದ್ಯೋಗ ಸಮಸ್ಯೆಗೆ ಕಾರಣ ಇಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸಕ್ರಮ ಸರಿಯಾಗಿಲ್ಲ, ಏನೂ ಸಮರ್ಪಕವಾಗಿಲ್ಲವೆಂದು ನಾನು ಹೇಳಬೇಕಾಗಿದೆ. ಅನೇಕರು ಸುಮ್ಮನೆ ಸ್ಕೂಲುಗಳಿಗೆ, ಕಾಲೇಜುಗಳಿಗೆ ಹೋಗಿ, ಎಸ್.ಎಸ್.ಎಲ್.ಸಿ. ಪಾಸ್ ಮಾಡುತ್ತಾರೆ, ಇಂಟರ್‌ಮೀಡಿಯೆಟ್ ಪಾಸ್ ಮಾಡುತ್ತಾರೆ, ಎಲ್‌ಎಲ್.ಬಿ. ಪಾಸ್ ಮಾಡುತ್ತಾರೆ. ಅನಂತರ ಒಂದು ಪದವಿಯನ್ನು ಪಡೆಯುತ್ತಾರೆ, ಅಷ್ಟೆ. ಆದರೆ ನಮ್ಮ ದೇಶದಲ್ಲಿ ವಿಶೇಷವಾಗಿ ಯಾವ ಯೋಜನಾಬದ್ಧವಾದ ವಿದ್ಯಾಭ್ಯಾಸ ಪದ್ಧತಿಯೂ ಇಲ್ಲ. ಕಾಲೇಜುಗಳಿಗೆ ಹೋಗತಕ್ಕಂಥವರಿಗೆ ಮತ್ತು ಚಿಕ್ಕ ಚಿಕ್ಕ ಕಸಬುಗಳನ್ನು ಮಾಡತಕ್ಕವರಿಗೆ ಸಾಕಾದಷ್ಟು ಟ್ರೈನಿಂಗ್ ಕೊಡಲು ಒಂದು ಯೋಜನಾ ಬದ್ಧವಾದ ವಿದ್ಯಾಭ್ಯಾಸವನ್ನು ಕೊಡಬೇಕು, ಯಾವ ಯಾವ ಬಾಲಕ ಬಾಲಕಿಯರಿಗೆ

(ಶ್ರೀ ಎ. ಆರ್. ಬದರಿನಾರಾಯಣ್.)

ಯಾವ ಯಾವುದರಲ್ಲಿ ಶಕ್ತಿ ಮತ್ತು ಜ್ಞಾನವಿದೆ ಎಂಬುದನ್ನು ನೋಡಿ ಆಯಾ ವಿದ್ಯಾಭ್ಯಾಸ ಕ್ರಮವನ್ನು ಕೊಡಬೇಕಾಗಿದೆ. ಅದಿಲ್ಲದೆ ಸುಮ್ಮನೆ ಎಲ್ಲರೂ ಬಿ.ಎ., ಬಿ.ಎಸ್.ಸಿ. ಮೊದಲಾದ ಬರೀ ಪರೀಕ್ಷೆಗಳನ್ನು ಪಾಸ್ ಮಾಡುವುದರಿಂದಲೇ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ನಮ್ಮ ದೇಶದಲ್ಲಿ ಔದ್ಯೋಗಿಕ ಶಿಕ್ಷಣ ಶಾಲೆಗಳು ಹೆಚ್ಚಾಗಿ, ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ ತಕ್ಷಣ, ಜೀವನಕ್ಕೆ ಅನುಕೂಲವಾದ ಕಸುಬಗಳನ್ನು ಕಲಿಸುವ ಶಾಲೆಗಳು ಏನುಂಟು, ಆ ಶಾಲೆಗಳನ್ನು ಪ್ರತಿ ಜಿಲ್ಲೆಯಲ್ಲೂ ಮತ್ತು ಪ್ರತಿ ತಾಲ್ಲೂಕಿನಲ್ಲೂ ತೆರೆಯಬೇಕಾದುದು ಈಗಿನ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಕ್ಕೆ ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ಇದಕ್ಕಾಗಿ ಸರ್ಕಾರದವರು ಮನುಷ್ಯ ತನ್ನ ಜೀವನವನ್ನು ಸಾಗಿಸುವುದಕ್ಕೆ ಮತ್ತು ದುಡಿಮೆ ಮಾಡುವುದಕ್ಕೆ ಬೇಕಾದ ಒಂದು ವಿದ್ಯಾಭ್ಯಾಸ ಕ್ರಮವನ್ನು ಒಂದು ಯೋಜನಾ ರೀತಿಯಲ್ಲಿ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ವಿನಯಪೂರ್ವಕವಾಗಿ ಅವರನ್ನು ಪ್ರಾರ್ಥಿಸುತ್ತೇನೆ.

ಕೆಲವು ನನ್ನ ಸ್ನೇಹಿತರು ಲಂಚ ಮತ್ತು ಇಫಿಷಿಯನ್ಸಿ ವಿಚಾರದಲ್ಲಿ ಅನೇಕ ಅಂಶಗಳನ್ನು ಹೇಳಿದ್ದಾರೆ. ಈ ಲಂಚ ನಿವಾರಣೆ ಮಾಡುವ ವಿಚಾರದಲ್ಲಿ ಎರಡು ತರಹಗಳಿವೆ. ಒಂದು ಲಾಂಗ್ ಟರ್ಮ್ ಯೋಜನೆ, ಇನ್ನೊಂದು ಷಾರ್ಟ್‌ಟರ್ಮ್ ಯೋಜನೆ. ಅನೇಕ ಸಂದರ್ಭಗಳಲ್ಲಿ ಕೆಳಗಿನ ಮಟ್ಟದಲ್ಲಿ ಲಂಚವಿರಬೇಕಾದರೆ ಅದಕ್ಕೆ ಅನೇಕ ಕಾರಣಗಳಿರುತ್ತವೆ. ಬಹುಶಃ ಬಡತನವೇ ಒಂದು ಕಾರಣವೆಂದು ಹೇಳಬಹುದು. ಏಕೆಂದರೆ ಅನೇಕ ಕಡೆಗಳಲ್ಲಿ ಸುಮಾರು 100ಕ್ಕೆ 75 ಭಾಗದ ಜನಗಳಲ್ಲಿ ಬಡತನವಿರುವುದರಿಂದ, ನೌಕರರಿಗೆ ಬರುತ್ತಿರುವ ಸಂಬಳಸಾರಿಗೆಗಳು ಬಹಳ ಕಡಮೆಯಾಗಿರುವುದರಿಂದ, ಅನೇಕರು ಲಂಚಕ್ಕೆ ಕೈಯೊಡ್ಡಬೇಕಾಗುತ್ತದೆ. ಆದ್ದರಿಂದ ಆರ್ಥಿಕ ಸ್ಥಿತಿ ಉತ್ತಮವಾಗುತ್ತಾ ಜನರ ನೈತಿಕ ಮಟ್ಟ ಜಾಸ್ತಿಯಾಗುತ್ತದೆ, ಆಗ ಲಂಚ ಕಡಮೆಯಾಗಬಹುದು ಎಂದು ನನಗೆ ಕಾಣುತ್ತದೆ. ಆದ್ದರಿಂದ ಸರ್ಕಾರದವರು ದೀರ್ಘವಾಗಿ ಆಲೋಚಿಸಿ ಜೀವನಕ್ಕೆ ಸಾಕಾಗುವಷ್ಟು ಒಂದು ಪ್ರಮಾಣದಲ್ಲಿ ನೌಕರರಿಗೆ ಸಂಬಳ ಸಾರಿಗೆಗಳನ್ನು ಈಗ ಕೊಡುತ್ತಿರುವುದಕ್ಕಿಂತಲೂ ಜಾಸ್ತಿಯಾಗಿ ಕೊಡುವುದಾದರೆ ಆಗ ಲಂಚನಿರೋಧಕ್ಕೆ ದಾರಿಯಾಗುತ್ತದೆಂದು ನಾವು ನಿರೀಕ್ಷಣೆ ಮಾಡಬಹುದು. ಆದರೆ ಈ ವಿಚಾರದಲ್ಲಿ ಜನರ ಸಹಕಾರ ಬಹಳಮಟ್ಟಿಗೆ ಬೇಕು. ಲಂಚ ಕೊಡುವವರು ಲಂಚವನ್ನು ತೆಗೆದುಕೊಳ್ಳುವವರಷ್ಟೇ ತಪ್ಪಿತಸ್ಥರು. ಮೊದಲು ಲಂಚವನ್ನು ಕೊಡುವುದನ್ನು ತಪ್ಪಿಸಬೇಕು. ಕೇವಲ ಸರ್ಕಾರೀ ನೌಕರರ ವಿಚಾರದಲ್ಲಿಯೇ ಆಗಲಿ ಅಥವಾ ಇತರರ ವಿಚಾರದಲ್ಲಿಯೇ ಆಗಲಿ ನಮ್ಮ ತಪ್ಪನ್ನು ನಾವೇ ಮೊದಲು ತಿದ್ದಿಕೊಳ್ಳಬೇಕು ಎಂಬುದಾಗಿ ನಾನು ಹೇಳುತ್ತೇನೆ. ಅದೂ ಅಲ್ಲದೆ ಲಂಚನಿರೋಧದ ವಿಷಯದಲ್ಲಿ ಉಗ್ರವಾದ ಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಅದಕ್ಕಾಗಿ ಒಂದು ಲಂಚನಿರೋಧ ಸಮಿತಿಯನ್ನು ಏರ್ಪಾಡು ಮಾಡಿದರೆ ಈ ಲಂಚವನ್ನು ತಡೆಗಟ್ಟಬಹುದು. ಇದಕ್ಕೆ ಮೂಲ ಕಾರಣವೇನು, ಲಂಚ ಹೇಗೆ ಹರಡುತ್ತದೆ, ಇದಕ್ಕೆ ಸೂಕ್ತ ಪರಿಹಾರವೇನು—ಇವೆಲ್ಲವನ್ನೂ ಇತ್ಯರ್ಥ ಮಾಡಲು ಒಂದು ಸಮಿತಿ ಅವಶ್ಯಕ. ಆಗ ಅನೇಕ ಜನರು ಬಂದು ತಮ್ಮ ಕುಂದುಕೊರತೆಗಳನ್ನು ಸಮಿತಿಯ ಮುಂದೆ ಹೇಳಿಕೊಳ್ಳಬಹುದು. ಈ ರೀತಿಯಾಗಿ ಲಂಚನಿರೋಧವನ್ನು ಯಶಸ್ವಿಯಾಗಿ ಕೊನೆಗಾಣಿಸಬಹುದು ಮತ್ತು ಸಂಪೂರ್ಣವಾಗಿ ತಪ್ಪಿಸಬಹುದು.

ಇನ್ನು ಇಫಿಷಿಯನ್ಸಿ ವಿಚಾರದಲ್ಲಿ ಹೇಳುವುದಾದರೆ, ಸರ್ಕಾರದಲ್ಲಿ ನಿಧಾನವಾಗಿ ನಡೆಯುವ ಕೆಲಸ ಕಾರ್ಯಗಳಲ್ಲಿ ಈಗಾಗಲೇ ಅನೇಕ ಟೀಕೆ ಟಿಪ್ಪಣಿಗಳು ಬಂದಿವೆ. ಈ ವಿಚಾರದಲ್ಲಿ ಬಹುಶಃ ನಮಗೆ ಸ್ವಾತಂತ್ರ್ಯ ಬಂದು ಕೇವಲ ಕೆಲವೇ ವರ್ಷಗಳಾಗಿರುವುದರಿಂದ ನಾವು ಇನ್ನೂ ಧೈರ್ಯವಾಗಿ ಹೆಚ್ಚಿನ ಮಟ್ಟದಲ್ಲಿ ಮುಂದಕ್ಕೆ ಬರಬೇಕು. ಪ್ರತಿಯೊಂದು ಕೆಲಸವನ್ನೂ ಸಂಪೂರ್ಣವಾಗಿ ಕಾರ್ಯಗತ ಮಾಡುವುದರಲ್ಲಿ ನಿರತರಾಗಬೇಕು. ಆಗ ಕಾಲಕ್ರಮೇಣ ಬಹುಶಃ ಎಫಿಷಿಯನ್ಸಿ ಬರುತ್ತದೆ. ಆದರೆ ಸರ್ಕಾರದವರು ಯಾರೇ ತಪ್ಪುಮಾಡಲಿ ಅಥವಾ ಯಾರೇ ಸಮರ್ಪಕವಾಗಿ ಕೆಲಸಮಾಡದೇ ಇರಲಿ, ಅವರ ವಿಚಾರವಾಗಿ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿ, ಮತ್ತು ಶ್ರದ್ಧೆವಹಿಸಿ, ಸರ್ಕಾರದವರು ಅದನ್ನು ಒಂದು ಕಾರ್ಯ ರೂಪಕ್ಕೆ ತಂದರೆ ಅದರಿಂದ ಒಳ್ಳೆಯದಾಗುತ್ತದೆ ಎಂದು ನಿರೀಕ್ಷಣೆಮಾಡಬಹುದು.

ಪ್ರೊಹಿಬಿಷನ್ ವಿಚಾರವಾಗಿ ನನ್ನ ಮಾನ್ಯ ಸ್ನೇಹಿತರನೇಕರು ಬಹಳವಾಗಿ ಹೇಳಿದ್ದಾರೆ. ನಾನು ಒಂದು ಮುಖ್ಯವಾದ ವಿಚಾರವನ್ನು ತಿಳಿಸಬೇಕಾಗಿದೆ. ಕೆಲವು ಜಿಲ್ಲೆಗಳಲ್ಲಿ ಹೆಂಡ ಕುಡಿದರೆ ತಪ್ಪಲ್ಲ, ಮತ್ತೆ ಕೆಲವು ಜಿಲ್ಲೆಗಳಲ್ಲಿ ಎಂದರೆ ಪಾನನಿರೋಧ ಆಚರಣೆಯಲ್ಲಿರುವ ಕಡೆಗಳಲ್ಲಿ ಮುಚ್ಚುಮರೆಯಾಗಿ ಕುಡಿದರೆ ತಪ್ಪು. ಈ ರೀತಿಯಾದ ಸ್ಥಿತಿಯಲ್ಲಿ ನಮ್ಮ ಈಗಿನ ಸರ್ಕಾರವಿದೆ. ಆದ್ದರಿಂದ ಈ ವಿಚಾರವನ್ನು ಬಹಳ ಚೆನ್ನಾಗಿ, ಕೂಲಂಕಷವಾಗಿ ವಿಮರ್ಶೆಮಾಡಿ, ಸಂಸ್ಥಾನಾದ್ಯಂತ ಹೆಂಡ ಕುಡಿಯುವ ಪದ್ಧತಿ ನಿರ್ಮೂಲವಾಗಿ ಮತ್ತು ಸಂಪೂರ್ಣವಾಗಿ ಹೋಗುವ ಹಾಗೆ ವ್ಯವಸ್ಥೆಮಾಡಬೇಕೆಂದು ಸರ್ಕಾರದವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಎಲ್ಲ ಕಡೆಗಳಲ್ಲಿಯೂ ಹೆಂಡದ ವ್ಯಾಪಾರದ ಸುಳಿವೇ ಇಲ್ಲದ ಹಾಗೆ ಏರ್ಪಾಡು ಮಾಡಬೇಕಾದುದು ಸರ್ಕಾರದ ಆದ್ಯಕರ್ತವ್ಯವಾಗಿದೆ ಎಂದು ನಾನು ಹೇಳಬೇಕಾಗಿದೆ. ಆದರೆ ಮಲೆನಾಡು ಪ್ರಾಂತಗಳ ವಿಷಯವಾಗಿ ಒಂದು ಮುಖ್ಯಾಂಶವನ್ನು ತಿಳಿಸಬೇಕಾಗಿದೆ. ಸುಮಾರು ಒಂದು ವರ್ಷದಲ್ಲಿ ಆರು ತಿಂಗಳು ಕಾಲ ಅಲ್ಲಿನ ಜನರು ಮಳೆಯಲ್ಲಿಯೇ ಇದ್ದುಕೊಂಡು ಕೆಲಸ ಮಾಡಬೇಕಾಗಿರುವುದರಿಂದ, ಅಲ್ಲಿ ಅಕ್ಕಿಯಿಂದ ತಯಾರು ಮಾಡಿದ ಮದ್ಯ ಪಾನೀಯವನ್ನು ಕುಡಿಯುವ ಅಭ್ಯಾಸವುಳ್ಳವರಾಗಿದ್ದಾರೆ. ಅದು ಅಲ್ಲಿನ ರೀತಿಮಾನಗಳಿಗನುಸಾರವಾಗಿಯೂ ಮತ್ತು ಆರೋಗ್ಯ ದೃಷ್ಟಿಯಿಂದಲೂ ಅಲ್ಲಿಗೆ ಸರಿಹೊಂದಿದೆ. ಆ ರೀತಿ ಅಲ್ಲಿ ಕುಡಿಯುವ ಪದ್ಧತಿ ಬಂದಿದೆ. ಇದರಿಂದ ಅವರು ದೃಢಕಾಯರಾಗಿರುವುದಲ್ಲದೆ, ದಕ್ಷತೆಯಿಂದಲೂ ಕೆಲಸಮಾಡುತ್ತಿದ್ದಾರೆ. ಇಂತಹವರಿಗೆ ಇವೊತ್ತಿನವರೆಗೂ ಯಾವ ಪ್ರೋತ್ಸಾಹವನ್ನೂ ನಮ್ಮ ಸರ್ಕಾರದವರು ಕೊಟ್ಟಿಲ್ಲ. ಇನ್ನು ಮುಂದೆ ಅಲ್ಲಿನ ಜನರಿಗೆ ಮಾತ್ರ ಲೈಸನ್ಸ್ ಮೂಲಕವಾದರೂ ಪಾನೀಯಗಳನ್ನು ಕುಡಿಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಲೈಸನ್ಸನ್ನು ತೆಗೆದುಕೊಳ್ಳಲು ಶಕ್ತಿಯಿಲ್ಲದವರಿಗೆ ಪರ್ಮಿಟ್ಟುಗಳ ಅನುಕೂಲತೆಗಳನ್ನಾದರೂ ಕಲ್ಪಿಸಿಕೊಡಬೇಕೆಂದು ಮಲೆನಾಡಿನ ಜನರ ಪರವಾಗಿ ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕೆಂದು ಇದ್ದೆ.

ಆದರೆ ಮಾನ್ಯ ಸಭಾಧ್ಯಕ್ಷರು ಬೆಲ್ ಹೊಡೆಯುವ ಪರಿಸ್ಥಿತಿಯಲ್ಲಿದ್ದಾರೆ. ಮುಖ್ಯವಾಗಿ ಕ್ರಮಬದ್ಧ ರೀತಿಯಲ್ಲಿ ಸಭೆ ನಡೆಯಬೇಕು. ನನಗೆ ಕೊಟ್ಟ ಕಾಲದಲ್ಲಿ ನನ್ನ ಎಲ್ಲಾ ಅಭಿಪ್ರಾಯಗಳನ್ನು ಮುಗಿಸಬೇಕಾಗಿದೆ. ಅನೇಕ ವಿಚಾರಗಳನ್ನು ಕುರಿತು ಮಾತನಾಡಲು ನನಗೆ ಆಸಕ್ತಿ ಇದ್ದರೂ ಕೂಡ ಅಧ್ಯಕ್ಷರು ಕಾಲ ಆಗಿದೆ ಎಂದು ಗಂಟೆಯ ಮೂಲಕ ಸೂಚನೆ ಕೊಟ್ಟಿರುವುದರಿಂದ ಇಲ್ಲಿಗೆ ನಾನು ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಉಳಿದ ಎಲ್ಲ ವಿಷಯಗಳನ್ನೂ ಬೇರೆ ಕಾಲದಲ್ಲಿ ಹೇಳುತ್ತೇನೆ. ನಮ್ಮ ಮೈಸೂರು ಸಂಸ್ಥಾನದ ರಾಜ್ಯಪಾಲರು ಮಾಡಿದ ಭಾಷಣದ ವಿಚಾರವಾಗಿ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ. ಒಟ್ಟಿನಲ್ಲಿ ಸರ್ಕಾರದವರು ಈಗ ಹಾಕಿಕೊಂಡಿರತಕ್ಕ ರೀತಿ ನೀತಿಗಳು ಮತ್ತು ಕಾರ್ಯಕ್ರಮಗಳು ಬಹಳ ಚೆನ್ನಾಗಿವೆ. ನಾನು ಈಗ ಕೊಟ್ಟಿರುವ ಸಲಹೆಗಳನ್ನು ಇದರಲ್ಲಿ ಸೇರಿಸಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಸಭಾಪತಿಗಳೇ, ಉಭಯಸದನಗಳನ್ನು ಕುರಿತು ರಾಜ್ಯಪಾಲರವರು ಮಾಡಿದ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಪುಷ್ಟೀಕರಿಸುತ್ತಾ, ಒಂದೆರಡು ಅಂಶಗಳನ್ನು ತಿಳಿಸಲು ಬಯಸುತ್ತೇನೆ. ಇಲ್ಲಿಯವರೆಗೆ ವಂದನಾನಿರ್ಣಯಕ್ಕೆ ತಿದ್ದುಪಡಿಗಳನ್ನು ಸೂಚಿಸಿ ಅವುಗಳ ಬಗ್ಗೆಯಾರು ಯಾರು ಮಾತನಾಡಿದರೋ ಅದನ್ನೆಲ್ಲವನ್ನೂ ಕೇಳಿದ್ದೇನೆ. ಆ ಎಲ್ಲ ಮಾನ್ಯ ಸದಸ್ಯರೂ ಈ ಶಾಸನ ಸಭೆ ಎಂದರೆ ಒಂದು ರಾಜಕೀಯ ವೇದಿಕೆ ಎಂದು ತಿಳಿದುಕೊಂಡು ರಾಜ್ಯಪಾಲರವರ ಭಾಷಣವನ್ನು ಟೀಕಿಸಿದ್ದಾರೆ. ಮಾತನಾಡಿದ ವಿರೋಧಿ ಪಕ್ಷದ ಸದಸ್ಯರು ಏನಾದರೂ ರಚನಾತ್ಮಕ ಟೀಕೆ ಮಾಡಬಹುದೆಂದು ನಾನು ತಿಳಿದುಕೊಂಡಿದ್ದೆನು. ಆದರೆ ಅವರ ಭಾಷಣಗಳು ಯಾವ ರೂಪದಲ್ಲಿಯೂ ರಚನಾತ್ಮಕವಾಗಿತ್ತೆಂದು ಕಾಣಲಿಲ್ಲ. ಸರಕಾರದವರು ಕೈಕೊಂಡಿರುವ ಅನೇಕ ಕಾರ್ಯಕ್ರಮಗಳ ಬಗ್ಗೆ ಒಂದು ಟೀಕಾ ಭಾವನೆಯನ್ನೇ ವ್ಯಕ್ತಪಡಿಸಿದರು. ಮುಖ್ಯವಾಗಿ ನಾವು ಈಗ ಎರಡನೆಯ ಪಂಚವಾರ್ಷಿಕ ಯೋಜನೆಯ ಎರಡನೆ ವರ್ಷದ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದಕ್ಕೆ 1956-57ನೇ ಆಯವ್ಯಯ ಪಟ್ಟಿಯಲ್ಲಿ ಅಂದಾಜುಗಳನ್ನು ಮಾಡಬೇಕಾಗಿದೆ. 1957-58ನೇ ವರ್ಷದಲ್ಲಿ ಸರಕಾರದವರ ಕಾರ್ಯಕ್ರಮ ಹೇಗಿದೆ ಎಂಬುದನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ನಿರೂಪಿಸಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆ ಈಡೇರುವುದಕ್ಕೆ ಸರ್ಕಾರದ ಮುಂದಿನ ಧೋರಣೆಯನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸ್ವಾತಂತ್ರ್ಯ ಬಂದನಂತರ ಜನ ಜೀವನದ ಪ್ರಗತಿ ಹೆಚ್ಚಾಗಿದೆ. ನಾವು ಬಯಸಿದ ಎಲ್ಲವನ್ನೂ ಈಡೇರಿಸುವದಕ್ಕೆ ನಮ್ಮ ಆರ್ಥಿಕ ಶಕ್ತಿ ಅಷ್ಟು ಇಲ್ಲ. ನಮ್ಮ ಆಶೆಗಳು, ಬಯಕೆಗಳು ಬೇಕಾದಷ್ಟಿವೆ. ಆದರೆ ಅವೆಲ್ಲವನ್ನೂ ಪೂರೈಸಿಕೊಳ್ಳಲು ಅಗತ್ಯವಾದಷ್ಟು ಆರ್ಥಿಕ ಶಕ್ತಿಯಿಲ್ಲ. ನಮ್ಮ ಶಕ್ತಿಗೆ ಅನುಗುಣವಾಗಿ ಒಂದು ಗೊತ್ತಾದ ಅವಧಿಯಲ್ಲಿ ಎಷ್ಟು ಸಾಧನೆ ಸಾಧ್ಯ ಎಂಬುದನ್ನು ಪರಿಶೀಲನೆ ಮಾಡಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸರಕಾರದವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೋ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಎಲ್ಲರೂ ಸಹಕರಿಸಬೇಕೆಂದು ಸೂಚನೆ ಕೊಟ್ಟಿದ್ದಾರೆ. ಈ ಧೋರಣೆಗೆ ನಾವೆಲ್ಲರೂ ಸಹಕರಿಸಿ ಸಲಹೆಗಳನ್ನು ಕೊಡಬೇಕು.

ಇನ್ನು ಎರಡನೆಯದಾಗಿ ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಭೂಸುಧಾರಣೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದೊಂದು ಮಹತ್ವದ ವಿಷಯ. ಯಾಕೆಂದರೆ ನಮ್ಮ ದೇಶದಲ್ಲಿ ಶೇಕಡಾ 71 ರಷ್ಟು ಜನರು ಭೂಮಿಯನ್ನು ಜೀವನಕ್ಕೆ ಅವಲಂಬಿಸಿದ್ದಾರೆ. ದೇಶದಲ್ಲಿ ಆಹಾರದ ಕೊರತೆ ಇದೆ. ಜನಸಂಖ್ಯೆಯು ಬೆಳೆಯುತ್ತಲೇ ಇದೆ. ಭೂಸುಧಾರಣೆಯ ವಿಷಯದಲ್ಲಿ ಅನೇಕ ತೊಡಕುಗಳು ಇವೆ. ಅವೆಲ್ಲವನ್ನೂ ಪರಿಹರಿಸುವುದು ಸರ್ಕಾರದ ಕರ್ತವ್ಯ. ಇಡೀ ರಾಜ್ಯಕ್ಕೆ ಒಂದೇ ತರದ ಕಾನೂನು ಜಾರಿಯಲ್ಲಿ ತರಬೇಕೆಂಬ ಉದ್ದೇಶದಿಂದ ಭೂಸುಧಾರಣೆಯ ವಿಷಯದಲ್ಲಿ ಸಲಹೆಗಳನ್ನು ನೀಡಲು ಶ್ರೀ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದಾರೆ. 1956ನೇ ನವೆಂಬರ್‌ನಿಂದ ಬೇರೆ ಬೇರೆ ಪ್ರದೇಶಗಳು ಸೇರಿ ಮೈಸೂರು ಒಂದು ರಾಜ್ಯವಾಗಿದೆ. ಬೇರೆ ಬೇರೆಯಾಗಿದ್ದು ಈಗ ಒಂದೆಡೆಗೆ ಸೇರಿರುವ ಐದು ಭಾಗಗಳಲ್ಲಿ ಬೇರೆ ಬೇರೆ ತರದ ಕಾನೂನುಗಳು ಇವೆ. ಪ್ರತಿಯೊಂದು ಭಾಗದಲ್ಲಿಯ ಸಮಸ್ಯೆ ಎಂಥದು ಇದಕ್ಕೆ ಪರಿಹಾರೋಪಾಯವೇನು ಎಂಬುದನ್ನು ಕೂಲಂಕಷವಾಗಿ ಆಲೋಚನೆ ಮಾಡಿ ಈ ಸಮಿತಿಯು ತನ್ನ ವರದಿಯನ್ನು ಸರ್ಕಾರದ ಮುಂದಿಡಲು ಸಾಧ್ಯವಾಗುವದೆಂದು ನಾನು ತಿಳಿದುಕೊಂಡಿದ್ದೇವೆ.

ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಗ್ರಾಮ ನೌಕರರಾದ ಪಟೇಲ ಶಾನುಭೋಗರ ಸಂಭಾವನೆಯನ್ನು ಹೆಚ್ಚಿಸಿರುವದನ್ನು ಸರ್ಕಾರದವರು ಇತ್ತೀಚೆಗೆ ಮಂಜೂರು ಮಾಡಿದ್ದಾರೆಂದು ಹೇಳಿದ್ದಾರೆ. ಗ್ರಾಮ ನೌಕರಿಗಳಿಗೆ ವಂಶ ಪಾರಂಪರ್ಯವಾಗಿ ಬಂದಿರುವ ಮತ್ತು ಇನಾಂತಿಜಮೀನುಗಳ ಹಕ್ಕುಗಳ ಭವಿಷ್ಯವೇನು ಎಂಬ ತೊಡಕಿನ ಸಮಸ್ಯೆಯೂ ಉದ್ಭವಿಸುವದು. ರಾಜ್ಯಪಾಲರವರು ಈ ವಿಷಯದ ಬಗ್ಗೆ ಸೂಕ್ತ ಪ್ರಸ್ತಾಪಮಾಡಿದ್ದಾರೆ.

ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ರಸ್ತೆ ಸಾರಿಗೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ನೂತನ ರಾಜ್ಯವು ರಚಿತವಾದ ಮೇಲೆ ರಸ್ತೆ ಸಾರಿಗೆಯ ವ್ಯವಸ್ಥೆಯಲ್ಲಿ ತೀವ್ರವಾದ ಲೋಪದೋಷಗಳು ಇವೆ ಎಂಬುದು ವ್ಯಕ್ತವಾಗಿದೆಯೆಂದು ಭಾಷಣದಲ್ಲಿ ಹೇಳಿದ್ದಾರೆ. ಸರಕಾರದವರು ಸೂಕ್ತವಾದ ಕ್ರಮವನ್ನು ಕೈಕೊಳ್ಳುತ್ತಾರೆಂದು ಪ್ರಸ್ತಾಪ ಮಾಡಿದ್ದು ಚೆನ್ನಾಗಿದೆಯೆಂದು ನನ್ನ ಅಭಿಪ್ರಾಯ. ಕೆರೆಗಳ ದುರಸ್ತಿ ಕೆಲಸವನ್ನು ಮಾಡುವದು ಸಹ ಅತ್ಯಾವಶ್ಯಕವಾಗಿದೆ. ಈ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವರೆಂದು ನಂಬುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ನಮ್ಮ ಸರಕಾರದವರು ಒಂದು ಖಚಿತವಾದ ನೀತಿಯನ್ನ ರೂಪಿಸುವದಕ್ಕೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇತ್ತೀಚೆಗೆ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ದೇಶದಲ್ಲಿ ಹೆಚ್ಚಾಗುತ್ತಿದೆ. ವಿದ್ಯಾವಂತರು ನಿರುದ್ಯೋಗಿಗಳಾಗಿರುವುದನ್ನು ಹೋಗಲಾಡಿಸುವದಕ್ಕೆ ತಕ್ಕ ಏರ್ಪಾಡು ಮಾಡುವದು ಅವಶ್ಯವಾಗಿದೆ. ವಿದ್ಯಾವಂತರಾದವರಿಗೆ ಒಂದು ಉದ್ಯೋಗವನ್ನು ಕಲ್ಪಿಸಿಕೊಡುವದು ಸರಿಯಾದದ್ದು.

ಪಾನನಿರೋಧದ ವಿಷಯವನ್ನು ಬಹಳ ಮಂದಿ ಪ್ರಸ್ತಾಪಮಾಡಿದರು. ಕೆಲವು ಕಡೆ ಕಳ್ಳಭಟ್ಟಿ ಇಳಿಸುವುದನ್ನು ಒಂದು ಗೃಹಕೈಗಾರಿಕೆಯಂತೆ ಅವಲಂಬಿಸಿ

(ಶ್ರೀ ಎ. ವಿ. ನರಸಿಂಹರೆಡ್ಡಿ)

ದ್ದಾರೆ ಎಂದು ಹೇಳಿದರು. ಆದರೆ ಅದು ಶೇಕಡ ನೂರರಷ್ಟು ಉತ್ಪ್ರೇಕ್ಷೆಯೆಂದು ವಿನಯದಿಂದ ಹೇಳುತ್ತೇನೆ. ಕಾರಣವೇನೆಂದರೆ ಎಲ್ಲಿ ಪಾನನಿರೋಧವಿದೆಯೋ ಅಲ್ಲಿ ಸರ್ಕಾರದ ಕಾಯಿದೆಗೆ ವಿರೋಧವಾಗಿ ಪಾನಮಾಡಬೇಕಾದರೆ ಅದು ಸ್ವಲ್ಪ ಗಟ್ಟಿಮುಟ್ಟಾದ ಜನರಿಗೆ ಸಾಧ್ಯವೇ ಹೊರತು ಬಡಬಗ್ಗರಿಗೆ ಸಾಧ್ಯವಿಲ್ಲ. ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿದಾಗ ಮಹಾತ್ಮ ಗಾಂಧಿಯವರ ಮನಸ್ಸಿನಲ್ಲೇನು ಭಾವನೆಯಿತ್ತೆಂಬುದನ್ನು ಗಮನಿಸಬೇಕಾದದ್ದು ಅವಶ್ಯಕ. ಆರ್ಥಿಕವಾಗಿ ಹಿಂದುಳಿದ ಜನರ ಜೀವನ ಉತ್ತಮವಾಗಬೇಕು, ಅವರ ದುಷ್ಟಪದ್ಧತಿ ಅಡಗಿ ಅವರಿಗೆ ಪೂರ್ಣ ಆರೋಗ್ಯ ದೊರೆಯಬೇಕು, ಅವರ ಮಕ್ಕಳುಮರಿ ಸುಶಿಕ್ಷಿತರೂ ಯೋಗ್ಯರಾದವರೂ ಆಗಬೇಕು, ಅವರ ನೈತಿಕಮಟ್ಟ ಹೆಚ್ಚಬೇಕು ಎಂಬುದು ಅವರ ಗುರಿಯಾಗಿತ್ತು. ಆ ದೃಷ್ಟಿಯಿಂದ ನೋಡಬೇಕೇ ವಿನಾ ಕೇವಲ ಅನುಕೂಲಸ್ಥರ ದೃಷ್ಟಿಯಿಂದ ಪೋಲಿಸಿನವರ ಜೊತೆ ಸೇರಿಕುಡಿಯುವರ ದೃಷ್ಟಿಯಿಂದ ಬೇರೆ ಹೆಸರಿನಿಂದ ಸೇವನೆ ಮಾಡುವವರ ದೃಷ್ಟಿಯಿಂದ ನೋಡಬಾರದು. ಪಾನನಿರೋಧ ಯಶಸ್ವಿಯಾಗಿಯೇ ನಡೆಯುತ್ತಿದೆ. ಒಂದೆರಡು ಕಡೆ ಲೋಪದೋಷಗಳಿರಬಹುದು. ಅದಕ್ಕೆ ತಕ್ಕ ಶಿಕ್ಷೆಯಾಗುತ್ತಿದೆ. ಆದ್ದರಿಂದ ಶೇಕಡ ನೂರರಷ್ಟು ಮಂದಿ ಕಳ್ಳಬಟ್ಟಿ ಇಳಿಸುವುದರಲ್ಲಿ ತೊಡಗಿದ್ದಾರೆ, ಇದನ್ನು ಗೃಹ ಕೈಗಾರಿಕೆಯನ್ನಾಗಿ ಅವಲಂಬಿಸಿದ್ದಾರೆಂದು ಹೇಳುವುದರಲ್ಲಿ ತಿರುಳಿಲ್ಲ. ಪಾನನಿರೋಧವನ್ನು ಜಾರಿಗೆ ತಂದಿರುವ ಕಡೆ ಕಾಯಿದೆ ಜಾರಿಯಲ್ಲಿದ್ದರೂ ಕೂಡ ಅದನ್ನು ವಿನಾಯಿಸಿ ಯಾರಾದರೂ ನಡೆದರೆ ಅದಕ್ಕೆ ತಕ್ಷಣ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಆ ರೀತಿ ನಡೆಯದಿರುವಂತೆ ಮಾಡಬೇಕಾದದ್ದು ಆದ್ಯಕರ್ತವ್ಯ. ಈ ವಿಚಾರದಲ್ಲಿ ಸಲಹೆ ಕೊಟ್ಟರೆ ಕಾರ್ಯಗತಮಾಡಬಹುದು ಎಂದು ಅಲ್ಲಿಗೆ ಆ ವಿಷಯ ಬಿಡುತ್ತೇನೆ.

ಆ ಮೇಲೆ ಜಿಲ್ಲಾಬೋರ್ಡುಗಳಿಗೆ ಚುನಾವಣೆಗಳಲ್ಲಿ ಸೋತ ಉಮೇದುವಾರರನ್ನು ತೆಗೆದುಕೊಂಡು ಸಮಿತಿ ರಚಿಸಿದ್ದಾರೆಂದು ಸರ್ಕಾರದ ಮೇಲೆ ಅಪಾದನೆ ಮಾಡಿದ್ದಾರೆ. ಒಬ್ಬ ಉಮೇದುವಾರನಾದವನು ತನ್ನ ಪ್ರದೇಶದ ಜನರ ಪರಿಚಯವನ್ನು ಚೆನ್ನಾಗಿ ಹೊಂದಿದ್ದು ಅನುಭವಶಾಲಿಯಾಗಿಯೂ ಜನಾನುರಾಗಿಯಾಗಿಯೂ ಇದ್ದರೆ ಆತನು ತನ್ನ ಕ್ಷೇತ್ರದ ಜನರಿಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಡಲು ಪ್ರತಿನಿಧಿಯಾಗಿ ಬಂದಿದ್ದರೆ, ಆತನನ್ನು ಜನರಿಗೆ ಉಪಕಾರಪೆಸಗಲೆಂದು ನಾಮಕರಣ ಮಾಡಿದ್ದರೆ, ಅದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವೆಂದು ಭಾವಿಸುವುದು ಯಾವ ಧರ್ಮವೋ ನನಗಂತೂ ಅರ್ಥವಾಗುವುದಿಲ್ಲ. ಯಾವುದೋ ಒಂದು ಆವೇಶದಲ್ಲಿ ಆ ಮಾತನ್ನು ಹೇಳಬಹುದೇ ಹೊರತು ಖಂಡಿತವಾಗಿ ಒಂದು ತಾಲ್ಲೂಕು ಅಭಿವೃದ್ಧಿಯಾಗಬೇಕಾದರೆ ಅದರ ಮಾಹಿತಿಯನ್ನು ತಿಳಿದ ಕ್ಷೇತ್ರದ ಜನರ ಸಂಪರ್ಕಆಗಬೇಕಾದ ಅಭಿವೃದ್ಧಿ ಕಾರ್ಯಗಳ ಪರಿಚಯವಿರುವಂಥವರು ಮುಂದೆ ಬಾರದಿದ್ದರೆ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಅಂಥ ಅನುಭವಶಾಲಿಗಳನ್ನು ಸೇರಿಸಿ ಅಭಿವೃದ್ಧಿ ಸಮಿತಿಯನ್ನು ರಚಿಸುವುದು ತಪ್ಪೇನೂ ಅಲ್ಲ, ಇದನ್ನರಿತು ಲೋಪವಿದ್ದರೆ ಅದನ್ನು ಕುರಿತು ಅಪಾದನೆ ಮಾಡಿದ್ದರೆ ಒಪ್ಪಬಹುದಾಗಿತ್ತು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The time is over now. The House will now rise and meet tomorrow at 12 o'clock. Before we disperse, I may inform the House that the Speaker of the Lok Sabha is going to address the members of this House as well as the other House here at 5 P. M.

The House was adjourned at Thirty-Five Minutes past Four of the Clock to meet again at Twelve of the Clock on Friday, the 14th June 1957.

WD 3035—GPB—900—12.9-57